Licence No. 60.
Licenced to Post without Prepayment

Reg. No. M. 1558.
"KODAGU" MERCARA, (Coorg).

# ಕೊಡಗು

ಸಂಪಾದಕರು—ಬಿ. ಪಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0

ಸಂಪುಟ ೫೦ | ತಾರೀಕು ೨೦-೭-೧೯೫೦ನೇ ಶುಕ್ರವಾರ | ಸಂಚಿಕೆ ೪

## ॥ ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಅಧಿವೇಶನ ॥

ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ತಾ ೧೫ ರಲ್ಲಿ ಮಧ್ಯಾಹ್ನ ಎರಡು ಘಂಟೆಗೆ ಬೆಂಗಳೂರಿನ ಅಲಂಕೃತ ಗಾಜಿನ ಮಂಟಪದಲ್ಲಿ ಕೂಡಿತು. ಕಾಂಗ್ರೆಸ್ ಅಧ್ಯಕ್ಷರಾದ ಪುರುಷೋತ್ತಮದಾಸ ಟಂಡನ್ ಇವರನ್ನು ಸಭಾಭವನಕ್ಕೆ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು. ಸಭಾ ಭವನದಲ್ಲಿ ಸುಮಾರು ೩೦೦ ಸದಸ್ಯರು ಹಾಗೂ ೧೫ ನೂರು ಪ್ರೇಕ್ಷಕರು ಇದ್ದರು. ಸ್ಥಳದ ಅಭಾವದಿಂದ ಒಳಗಡೆ ಹೋಗಲಾಗದ ನೂರಾರು ಪ್ರೇಕ್ಷಕರು ಹೊರಗಿನಿಂದೆ ನೋಡಿದರು.

ಅಧ್ಯಕ್ಷರು ಸಿದ್ಧಾಸಹೀತ ಹಿಂದುಗಡೆ, ತ್ರಿವರ್ಣ ಧ್ವಜದಿಂದ ಅಲಂಕರಿಸಲ್ಪಟ್ಟ ಸ್ತಬ್ಧಚಿತ್ರದಲ್ಲಿ, ಅಳಿದ ಮಹಾತ್ಮಾ ಗಾಂಧಿ, ಮುಖ್ಯ ಮಂತ್ರಿ ನೆಹರೂ ಮತ್ತು ದಿವಂಗತ ಸರ್ದಾರ ಪಟೇಲ ಇವರ ಭಾವಚಿತ್ರಗಳಿದ್ದವು.

ಮುಖ್ಯಮಂತ್ರಿ ನೆಹರೂರವರು ಆಗಮಿಸುತ್ತಲೇ ಸಭಿಕರು ಹರ್ಷೋದ್ಗಾರದಿಂದ ಅವರನ್ನು ಸ್ವಾಗತಿಸಿದರು. ವೇದಿಕೆಯ ಮೇಲೆ ನೆಹರೂರವರ ಪಕ್ಕಕ್ಕೆ ಕಾಶ್ಮೀರದ ಮುಖ್ಯ ಮಂತ್ರಿಗಳಾದ ಶೇಕ ಅಬ್ದುಲ್ಲಾರು ಕುಳಿತುಕೊಂಡಿದ್ದರು.

### ಅಧ್ಯಕ್ಷರ ಭಾಷಣ.

ಪುರುಷೋತ್ತಮದಾಸ ಟಂಡನ್ನರು ಅಧಿವೇಶನವನ್ನು ಉದ್ಘಾಟಿಸುತ್ತಾ ಹೀಗೆ ಹೇಳಿದರು.

ಕೆಲವು ಸದಸ್ಯರು ಕಾಂಗ್ರೆಸ್ ಸಂಸ್ಥೆಯನ್ನು ತ್ಯಜಿಸಿ ಹೋದುದಕ್ಕೆ ನನಗೆ ಸಂತಾಪವೂ ವಿಷಾದವೆನಿಸುತ್ತಿದೆ. ಆದರಲ್ಲಿ ಶೇಕರು ನನ್ನ ಹಳೆಯ ಸಹೋದ್ಯೋಗಿಗಳು. ಕೇಂದ್ರ ಹಾಗೂ ಪ್ರಾಂತ ಸರಕಾರಗಳು ತಮ್ಮಗೆ ಇಷ್ಟವಾಗುವಂತೆ ನೀತಿಯನ್ನು ಬದಲಾಯಿಸಿಕೊಳ್ಳಲಿಲ್ಲವೆಂಬುದೇ ಇವರ ಮುಖ್ಯ ಆರೋಪದಲ್ಲಿ ಅನೇಕ ಆರೋಪಗಳನ್ನು ಮಾಡಿದ್ದಾರೆ. ಅವರು ಕಾಂಗ್ರೆಸ್ಸಿನಲ್ಲುಳಿದು, ಅಸ್ಥೈರ್ಯದಲ್ಲಿ ಕಂಡ ಬ್ರಮೆಗಳಿರುವ ಕುಂದು ಕೊರತೆಗಳನ್ನು ನಿವಾರಿಸಲು ಪ್ರಯತ್ನಿಸಿದ್ದರೆ ಒಳಿತಾಗಿತ್ತೆಂದು ನನಗೆ ಈಗಲೂ ಅನ್ನಿಸುತ್ತದೆ. ಎಷ್ಟೆಂದರೂ ಈ ಸರ್ಕಾರಗಳು ನಮ್ಮ ಇಚ್ಛೆಗಳನ್ನು ಪೂರಿ ಕಾರ್ಯ ಮಾಡಲಾರವು. ಕೇಂದ್ರ ಅಥವಾ ಪ್ರಾಂತ ಸರಕಾರಗಳ ಕಾರ್ಯನಿರ್ವಹಣೆಗೆ ಕಾಂಗ್ರೆಸ್ಸೇ ಪರಮಾಧಿಕಾರಿ ಸಂಸ್ಥೆಯಾಗಿದೆ. ಕಾಂಗ್ರೆಸ್ಸಾಗಲೀ ಅಥವಾ ಯು. ಸಿ. ಸಿ. ಯಾಗಲೀ ಸರ್ಕಾರದಲ್ಲಿ ಏನಾದರೂ ಒಂದನ್ನು ಸರಿಪಡಿಸಲಿಚ್ಛಿಸಿದರೆ ಎ. ಐ. ಸಿ. ಸಿಯು ಅಭಿಪ್ರಾಯವನ್ನು ಯೂರೂ ತಡೆಯಲಾರರು. ಆದ್ದರಿಂದ ನಮ್ಮ ಸಹಘಾಟಿಗಳು ನಮ್ಮೊಡನೇ ಉಳಿದುಕೊಂಡು ಒಳಗಿನಿಂದಲೇ ಸುಧಾರಣೆಯನ್ನು ಮಾಡಬೇಕಾಗಿತ್ತೆಂದು ಯೂವಾಗಲೂ ನನ್ನ ಅಭಿಪ್ರಾಯವಾಗಿದೆ. ಸ್ಥಾಸ್ಥೈಯನ್ನು ಬಿಟ್ಟುಹೋಪ ಕಾಂಗ್ರೆಸಿಗರು ಕಾಂಗ್ರೆಸ್ಸಿನಲ್ಲಿ ತಮ್ಮದು ನಡೆಸುದು ಎಷ್ಟೆನ ಭಾವನೆಯನ್ನು ತಳೆದಂತೆ ತೋರುತ್ತದೆ. ಹೊರಗಡೆ ಹೋಗಿ ಕಾಂಗ್ರೆಸ್ಸಿನ ವಿರುದ್ಧ ಹೋರಾಡುವುದರಿಂದಲೇ ಸುಧಾರಣೆಯನ್ನು ಮಾಡಬಹುದೆಂಬುದು ಅವರ ತಿಳುವಳಿಕೆಯೆಂದು ಕಾಣುತ್ತದೆ. ಕಾಂಗ್ರೆಸ್ ಅಧ್ಯಕ್ಷರು ಮುಂದುವರಿಯುತ್ತಾ ಯೋಜನಾ ಸಮಿತಿಯ ವರದಿಯು ಇನ್ನೂ ಸಿದ್ಧವಾಗದಿದ್ದುದರಿಂದಲೇ ಸುಧಾರಣೆಯನ್ನು ಮಾಡಬಹುದೆಂಬುದು ಅವರ ತಿಳುವಳಿಕೆಯೆಂದು ಕಾಣುತ್ತದೆ. ಕಾಂಗ್ರೆಸ್ ಅಧ್ಯಕ್ಷರು ಮುಂದುವರಿಯುತ್ತಾ ಯೋಜನಾ ಸಮಿತಿಯ ವರದಿಯು ಇನ್ನೂ ಸಿದ್ಧವಾಗದಿದ್ದುದರಿಂದ ದಿಲ್ಲಿಯಲ್ಲಿ ಕಾಂಗ್ರೆಸ್ ಜನಾವಣೆಯ ಘೋಷಣಾ ಪತ್ರವನ್ನು ತಯಾರಿಸುವುದಾಗಲಿಲ್ಲ. ಯೋಜನಾ ಸಮಿತಿ ವರದಿಯ ಹಾಗೂ ಮುಖ್ಯಮಂತ್ರಿ ನೆಹರೂರವರು ಎ. ಐ. ಸಿ. ಸಿ ಗೆ ಮಾಡಿದ ವರದಿಯ ಆಧಾರಗಳ ಮೇಲೆ ಕಾರ್ಯಕಾರಿ ಸಮಿತಿಯು ಘೋಷಣೆಯ ಪತ್ರವನ್ನು ಈಗ ಸಿದ್ಧಪಡಿಸಿದೆ.

### ನೆಹರೂರವರ ವರದಿ

ಮುಖ್ಯಮಂತ್ರಿ ನೆಹರೂರವರು ಎ. ಐ. ಸಿ. ಸಿ ಗೆ ತಮ್ಮ ವರದಿಯನ್ನೊಪ್ಪಿಸಿದರು. ಕಾಂಗ್ರೆಸಿನ ಆಜ್ಞೆಯು ಮೇರೆಗೆ ಮುಖ್ಯ ಮಂತ್ರಿಗಳ ಹುದ್ದೆಯಲ್ಲಿರ ಪವರು, ಪ್ರತಿ ವರ್ಷವೂ ಸರ್ಕಾರವು ಮಾಡಿದ ಕಾರ್ಯಗಳ ಅಂದರೆ ಸರಕಾರವು ತಳೆದ ಧೋರಣೆ ಹಾಗೂ ಅದು ಸಾಧಿಸಿದ ಕಾರ್ಯ ಮತ್ತು ಸಾಧಿಸಲು ಸಾಧ್ಯವಾದ ಕಾರ್ಯಗಳ ಬಗ್ಗೆ ಕಾಂಗ್ರೆಸಿಗೆ ವರದಿಯೂ ನ್ನೊಪ್ಪಿಸುವುದು ಒಂದು ದೊಡ್ಡ ಕಾರ್ಯವಾಗಿದೆ.

ಈ ವರದಿಯಲ್ಲಿ ನಿಮಗೆ ಏನಾದರೂ ಒಂದು ಸಂಶಯದ ವಿಷಯವನ್ನು ತಿಳಿಸಬೇಕೆಂದಿದ್ದಲ್ಲಿ, ಈ ಸಮಸ್ಯೆಗಳ ಬಗ್ಗೆ ವಿಚಾರವಹಿಸಲು ಹಾಗೂ ಅವಶ್ಯಬಿದ್ದರೆ ಸರ್ಕಾರವನ್ನು ಟೀಕೆಮಾಡಲು ನಿಮಗೆ ಒಂದು ಅವಕಾಶವನ್ನೇ ಕಲ್ಪಿಸಿಕೊಡುವುದೇ ಮುಖ್ಯ ಉದ್ದೇಶವಾಗಿದೆ. ಕಾಂಗ್ರೆಸು ಇಚ್ಛಿಸಿದ ಮೂಲಕಲ್ಪನೆ ನಾನು ಮುಖ್ಯ ಮಂತ್ರಿಯಾಗಿದ್ದೇನೆ. ರಾಷ್ಟ್ರವು ಅದನ್ನೆ ಮುನ್ನಡೆಯುತ್ತಿದೆ ಎಂಬ ಪ್ರಶ್ನೆ ನಂಬಿಕೆಗೆ

ಅದ್ದರಿಂದ ನಾನು ಈ ಸ್ಥಳದಲ್ಲಿ ಇರುವುದೂ ಅಥವಾ ಬಿಡುವುದೂ ಸಂಪೂರ್ಣವಾಗಿ ಕಾಂಗ್ರೆಸ್ ಸಂಸ್ಥೆಯ ಮೇಲೆ ಕಾಂಗ್ರೆಸ್ ಪಾರ್ಲಿಮೆಂಟರಿ ಅಧಿವೇಶನದ ಕೈಯಲ್ಲಿದೆ. ಅದ್ದರಿಂದ ಮುಖ್ಯಮಂತ್ರಿಹುದಕ್ಕೆ ಯಾವ ಸ್ಪರ್ಧೆಯೂ ಇಲ್ಲವೆಂದೂ ಮತ್ತು ಹಿಂದೂ ಧರ್ಮವನ್ನೂ ಳಗೊಂಡು ಪೂರ್ವದ ಪರ್ಷಿಯನ್ನು ಹತ್ತಿಕ್ಕಿದೆಯೆನ್ನುವ ಆಚ್ಛಿ ಇಲ್ಲವೆಂದೂ ವರದಿಯು ಸ್ಪಷ್ಟಪಡಿಸಬೇಕೆಂದು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ ನೆಹರೂರವರು ಹೀಗೆ ಹೇಳಿದರು.

ಆ ಪ್ರಶ್ನೆಯು ನನಗೆ ಅಶ್ಚರ್ಯವನ್ನುಂಟುಮಾಡಿತು. ಜಾತ್ಯತೀತ ರಾಷ್ಟ್ರದಲ್ಲಿ ಅಲ್ಪ ಸಂಖ್ಯಾಕರು ಹತ್ತಿಕ್ಕಲ್ಪಡುವದಿಲ್ಲ, ಅಥವಾ ಬಹು ಸಂಖ್ಯಾಕರಾಗುವುದಿಲ್ಲ ಯೋಗ್ಯವಾಗಿ ನಡೆಸಿಕೊಂಡ ಬಂದ ಜಾತ್ಯತೀತ ರಾಷ್ಟ್ರದಲ್ಲಿ ವ್ಯಕ್ತಿಯು ತನ್ನ ಧರ್ಮವನ್ನಾಗಲೀ, ತನ್ನ ಸಂಸ್ಕೃತಿಯನ್ನಾಗಲೀ ಬಿಟ್ಟುಕೊಡುವುದಿಲ್ಲ. ನನ್ನಲ್ಲಿ ಸದ್ಯಕ್ಕೆ ಇರುವಂತೆ ಅಲ್ಲಿ ಪ್ರಶ್ನೆಕಕೆಯು ಭಾವನೆಗೆ ಎಡೆಇರುವುದಿಲ್ಲ.

ಅನಂತರ ಮುಖ್ಯಮಂತ್ರಿಗಳು ಅಧಿವೇಶನದ ಮುಂದೆ ಚರ್ಚಾರ್ಹವಾದ ಘೋಷಣಾಪತ್ರದ ಕರಡನ್ನು ಪ್ರಸ್ತಾಪಿಸಿದರು.

ಘೋಷಣಾ ಪತ್ರದ ಪ್ರಾರಂಭದಲ್ಲಿ ಮಹಾತ್ಮಾ ಗಾಂಧಿಯವರ ಆದರ್ಶಗಳ ಬಗ್ಗೆ ಇರುವ ಅಧ್ಯಾಯದ ಬಗ್ಗೆ ಹೇಳುತ್ತಾ ನೆಹರೂರವರು ಹೀಗೆ ಹೇಳಿದರು. ಕೆಲವು ಜನರು ಇವುಗಳು ರಾಜಕಾರಣಿಗಳ ಥಳಕುಗಳೆಂದು ತಿಳಿಯಬಹುದು. ರಾಜಕಾರಣಿಗಳ ವಿರುದ್ಧ ಮಾಡಿದ ಈ ಆರೋಪವು ಎಲ್ಲಿ ಸತ್ಯವಾಗಬಹುದೋ ಎಂದು ನನಗೆ ಹೆದರಿಕೆಯೂಗುತ್ತಿದೆ. ಜಗತ್ತಿನಾದ್ಯಂತ ಎಲ್ಲಾ ಕಡೆಗೂ ಉದಾತ್ತ, ತತ್ವಗಳ ಬಗ್ಗೆ ಮಾತನಾಡುತ್ತಿರುವರೇ ಹೊರತು ಕಾರ್ಯಾಚರಣೆಯಲ್ಲಿ ತರುತ್ತಿಲ್ಲ. ಆದರೆ ಸದ್ಯಕ್ಕೆ ನಾವು ಅವುಗಳ ಬಗ್ಗೆ ಬರೀ ಮಾತನಾಡದೆ, ಕಾರ್ಯದಲ್ಲಿ ತರಲು ಪ್ರಯತ್ನಿಸಿದ್ದೇವೆ.

ಆದ್ದರಿಂದ ಈ ಘೋಷಣೆಯಲ್ಲಿ ಕಾಸ್ಮೀಯ ಜೀವಪದ ನೈತಿಕ ತಳಪಾಯದ ಹಾಗೂ ರಾಜಕೀಯ ಕಾರ್ಯಾಚರಣೆಯ ಬಗ್ಗೆ ಹೇಳಿರುತ್ತೇವೆ. ಆದರೆ ಇದೇ ಒಂದರ ಥಳಕಲ್ಲ. ನಮ್ಮ ಸಾರ್ವಜನಿಕ ಹಾಗೂ ಖಾಸಗಿ ಜೀವನದಲ್ಲಿ ಈ ತತ್ವಗಳನ್ನು ಅಳವಡಿಸಿಕೊಳ್ಳಬೇಕೆಂಬುದೇ ನಮ್ಮ ಉದ್ದೇಶವಾಗಿದೆ. ಈ ತತ್ವಗಳನ್ನು ಅಳವಡಿಸಿಕೊಳ್ಳುವುದರಿಂದ ಮಾತ್ರ ನಾವು ಜಗತ್ತಿನಲ್ಲಿ ಶಾಂತಿಯನ್ನು ಸ್ಥಾಪಿಸಲು ಸಾಧ್ಯವಾಗುತ್ತದೆ.

ಕಾಂಗ್ರೆಸು ಅಧ್ಯಕ್ಷರೂ ಕಾಂಗ್ರೆಸ್ಸಿನ ಕೆಲವು ಪ್ರಶ್ನೆಯೊಂದಕ್ಕೆ ಉತ್ತರಕೊಡುತ್ತಾ ಏಳಾ ಪ್ರಾಂತಗಳಲ್ಲಿ ಮೂರು ಪ್ರಾಂತಗಳನ್ನು ಜಾಯಮಾನದಲ್ಲಿ ತರಬೇಕಾಗಿದೆ. ಮುಖ್ಯಮಂತ್ರಿಗಳು ಇಡಬೇಕೆಂದು ಪ್ರಾರಂಭಿಸಿದ್ದಾರೆ. ಇದಕ್ಕೆ ಇತರ ಮಂತ್ರಿಮಂಡಲಗಳು ಪ್ರತಿಕ್ರಿಯೆ ಏನೆಂಬುದನ್ನು ನೋಡಬೇಕಾಗಿದೆ ಎಂದೂ ಹೇಳಿದರು.

ಉತ್ತರ ಪ್ರದೇಶ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾದ ಅಲಗರಾಯೆ ಇವರು, ಕಾಂಗ್ರೆಸು ಸರಕಾರವನ್ನು ಪಡೆದೆ ಪ್ರಾಂತಗಳಲ್ಲಿ ವಿಲ್ಲಾ ಕಾಂಗ್ರೆಸ್ ಮುಖ್ಯಮಂತ್ರಿಗಳು ಪ್ರಾಂತದ ಕಾಂಗ್ರೆಸು ಸಮಿತಿಗಳಿಗೆ ತಮ್ಮ ಅಡಳಿತೆಯ ಬಗ್ಗೆ ವರದಿಯನ್ನೊಪ್ಪಿಸಬೇಕು ಎಂಬುದಾಗಿ ಸೂಚಿಸಿದರು.

ಅವರು ಮತ್ತೆ ಮಂಡಿಸಿದ ಸೂಚನೆಗಳಾವುವೆಂದರೆ, ಸರಕಾರದ ಅಡಳಿತೆಯು ಹೆಚ್ಚು ವರ್ಧಿಸಲ್ಪಟ್ಟದ್ದು, ಇದರ ಬಗ್ಗೆ ಸಾಕ್ಷ್ಯಕರಣ ಕಡಿತ ಮಾಡಬೇಕು. ಅಧಿಕಾರಿಯಂದಿರದ ಪಾಕಿಸ್ತಾನದ ಅಲ್ಪ ಸಂಖ್ಯಾಕರ ಹೊರಗಡೆ ಕಳುಹಿಸಲ್ಪಟ್ಟ ಇದರಿಂದ ಭಾರತದ ಜನಸಂಖ್ಯೆಯು ಹೆಚ್ಚುದಂತೆ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಮುಸ್ಲಿಮ್ ಲೀಗ್ ಮಾಡಿದ ಪ್ರಯತ್ನದ ಬಗ್ಗೆಯೂ ವರದಿಯಲ್ಲಿ ಹೇಳಬೇಕು. ಭಾರತವು ಜಾತ್ಯತೀತ ಆದರ್ಶವನ್ನು ಎತ್ತಿಹಿಡಿದು, ಧಾರ್ಮಿಕ ಜನಾಂಗಗಳ ನಡುವೆ ಐಕ್ಯತೆಯನ್ನು ಕಲ್ಪಿಸಬೇಕೆನ್ನುವ ದೃಷ್ಟಿಯಿಟ್ಟುವೆಂದೂ ಮತ್ತು ಹಿಂದೂ ಧರ್ಮವನ್ನೊ ಳಗೊಂಡು ಪೂರ್ವದ ಪರ್ಷಿಯನ್ನು ಹತ್ತಿಕ್ಕಿದೆಯೆನ್ನುವ ಆಚ್ಛಿ ಇಲ್ಲವೆಂದೂ ವರದಿಯು ಸ್ಪಷ್ಟಪಡಿಸಬೇಕೆಂದು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ ನೆಹರೂರವರು ಹೀಗೆ ಹೇಳಿದರು.

ಆ ಪ್ರಶ್ನೆಯು ನನಗೆ ಅಶ್ಚರ್ಯವನ್ನುಂಟುಮಾಡಿತು. ಜಾತ್ಯತೀತ ರಾಷ್ಟ್ರದಲ್ಲಿ ಅಲ್ಪ ಸಂಖ್ಯಾಕರು ಹತ್ತಿಕ್ಕಲ್ಪಡುವದಿಲ್ಲ, ಅಥವಾ ಬಹು ಸಂಖ್ಯಾಕರಾಗುವುದಿಲ್ಲ ಯೋಗ್ಯವಾಗಿ ನಡೆಸಿಕೊಂಡ ಬಂದ ಜಾತ್ಯತೀತ ರಾಷ್ಟ್ರದಲ್ಲಿ ವ್ಯಕ್ತಿಯು ತನ್ನ ಧರ್ಮವನ್ನಾಗಲೀ, ತನ್ನ ಸಂಸ್ಕೃತಿಯನ್ನಾಗಲೀ ಬಿಟ್ಟುಕೊಡುವುದಿಲ್ಲ. ನನ್ನಲ್ಲಿ ಸದ್ಯಕ್ಕೆ ಇರುವಂತೆ ಅಲ್ಲಿ ಪ್ರಶ್ನೆಕಕೆಯು ಭಾವನೆಗೆ ಎಡೆಇರುವುದಿಲ್ಲ.

ಅನಂತರ ಮುಖ್ಯಮಂತ್ರಿಗಳು ಅಧಿವೇಶನದ ಮುಂದೆ ಚರ್ಚಾರ್ಹವಾದ ಘೋಷಣಾಪತ್ರದ ಕರಡನ್ನು ಪ್ರಸ್ತಾಪಿಸಿದರು.

ಘೋಷಣಾ ಪತ್ರದ ಪ್ರಾರಂಭದಲ್ಲಿ ಮಹಾತ್ಮಾ ಗಾಂಧಿಯವರ ಆದರ್ಶಗಳ ಬಗ್ಗೆ ಇರುವ ಅಧ್ಯಾಯದ ಬಗ್ಗೆ ಹೇಳುತ್ತಾ ನೆಹರೂರವರು ಹೀಗೆ ಹೇಳಿದರು. ಕೆಲವು ಜನರು ಇವುಗಳು ರಾಜಕಾರಣಿಗಳ ಥಳಕುಗಳೆಂದು ತಿಳಿಯಬಹುದು. ರಾಜಕಾರಣಿಗಳ ವಿರುದ್ಧ ಮಾಡಿದ ಈ ಆರೋಪವು ಎಲ್ಲಿ ಸತ್ಯವಾಗಬಹುದೋ ಎಂದು ನನಗೆ ಹೆದರಿಕೆಯೂಗುತ್ತಿದೆ. ಜಗತ್ತಿನಾದ್ಯಂತ ಎಲ್ಲಾ ಕಡೆಗೂ ಉದಾತ್ತ, ತತ್ವಗಳ ಬಗ್ಗೆ ಮಾತನಾಡುತ್ತಿರುವರೇ ಹೊರತು ಕಾರ್ಯಾಚರಣೆಯಲ್ಲಿ ತರುತ್ತಿಲ್ಲ. ಆದರೆ ಸದ್ಯಕ್ಕೆ ನಾವು ಅವುಗಳ ಬಗ್ಗೆ ಬರೀ ಮಾತನಾಡದೆ, ಕಾರ್ಯದಲ್ಲಿ ತರಲು ಪ್ರಯತ್ನಿಸಿದ್ದೇವೆ.

ಆದ್ದರಿಂದ ಈ ಘೋಷಣೆಯಲ್ಲಿ ಕಾಸ್ಮೀಯ ಜೀವಪದ ನೈತಿಕ ತಳಪಾಯದ ಹಾಗೂ ರಾಜಕೀಯ ಕಾರ್ಯಾಚರಣೆಯ ಬಗ್ಗೆ ಹೇಳಿರುತ್ತೇವೆ. ಆದರೆ ಇದೇ ಒಂದರ ಥಳಕಲ್ಲ. ನಮ್ಮ ಸಾರ್ವಜನಿಕ ಹಾಗೂ

ರಾಜಕೀಯ ಚಿಂತನಗಳನ್ನು ನೈತಿಕತೆಯ ನೆಲಗಟ್ಟಿನ ಮೇಲೆ ಬೆಳೆಸದೇ ಹೋದರೆ ನಾವು ಪ್ರಗತಿಯನ್ನು ಸಾಧಿಸಬೆ ಅಧೋಗತಿಗೆ ಇಳಿಯುವದು ನಿಜ. ನಮ್ಮ ಸಾರ್ವಜನಿಕ ಜೀವನದ ಅಧೋಗತಿಗೆ ಇದೆ ಕಾರಣ. ಅದನ್ನು ಪುನರ್ಜೀವನಗೊಳಿಸುವುದರಿಂದ ಪ್ರಯೋಜನವಿಲ್ಲ. ಅದನ್ನು ಎದುರಿಸಿ ಸಮರ್ಥವಾಗಿ ಎದುರಿಸಬೇಕು. ಆದ್ದರಿಂದ ಭೂಸಾವಣೆಯ ಧೋರಣೆಯಲ್ಲಿ ಇದನ್ನು ಮರೆಯದಿರಬೇಕೆಂದು ಇದಕ್ಕೆ ಮೇಲೆ ಹೆಚ್ಚು ಒತ್ತಾಯಪಡಿಸಿದೇವೆ. ಚುನಾವಣೆಯ ಪ್ರಶ್ನೆಯಲ್ಲಿ ಯಶಸ್ಸು ಸಿಕ್ಕಿಲಿಲ್ಲವೂ ಚಿಂತೆಯಿಲ್ಲ; ಆದರೆ ಇದಕ್ಕೆ ಮಾತ್ರ ನಾವು ಅಂಟಿಕೊಳ್ಳಲೇಬೇಕು.

ಅವರು ಪ್ರಸ್ತಾಪಿಸಿರುವಂತಾ ರಾಷ್ಟ್ರ ಧ್ಯೇಯವುದಾದರೂ ಪ್ರಗತಿಯನ್ನು ಸಾಧಿಸಬೇಕಾದರೆ, ಪ್ರಜೋತ್ಪಾದನೆ ವೃದ್ಧಿಯಿಂದ ಹೋಗಬೇಕು. ಯೋಜನಾ ಸಮಿತಿಯು ಈ ಬಗ್ಗೆ ತನ್ನ ವರದಿಯನ್ನು ಒಪ್ಪಿಸಿದೆ. ಕಾರ್ಯಕಾರೀ ಸಮಿತಿಗೆ ಇದನ್ನು ಚರ್ಚಿಸಲು ಸಮಯವಿದ್ದಿಲ್ಲ. ಆದ್ದರಿಂದ ಎ. ಐ. ಸಿ. ಸಿ. ಗೆ ಇದನ್ನು ಆದ್ಯತೆಯ ಮೇರೆಗೆ ಪರಿಗಣಿಸಲು ಸೂಚಿಸಿದೆ.

ತನ್ನ ರಾಷ್ಟ್ರವು ಅಭ್ಯುದಯವಾದರೆ ಸಾಕೆಂಬ ಸ್ವಾರ್ಥದಿಂದ ಆಂತರಿಕ ಹೊಗಿದ್ದರೆ, ಯೋಜನೆಯ ಪ್ರಶ್ನೆಯೇ ಉದ್ಭವಿಸುತ್ತಿರಲ್ಲಿ. ನಾವು ಅಭಿವೃದ್ಧಿಪಡಿಸಿಕೊಳ್ಳಬಹುದಾದ ಸಂಪತ್ತು. ಆದರೆ ಇದು ರಾಷ್ಟ್ರವು ಅಭ್ಯುದಯದಿಂದ ಆಂತರಿಕ ಹೊಗಿದ್ದರೆ, ಯೋಜನೆಯ ಪ್ರಶ್ನೆಯೇ ಉದ್ಭವಿಸುತ್ತಿರಲ್ಲಿ. ನಾವು ಅಭಿವೃದ್ಧಿಪಡಿಸಿಕೊಳ್ಳಬಹುದಾದ ಸಂಪತ್ತು. ಆದರೆ ಇದು ರಾಷ್ಟ್ರವು ಅಭ್ಯುದಯ

ಸಂಪತ್ತಿನಿಂದ ಕೂಡಿಲ್ಲ ಅಷ್ಟೆ ಅಲ್ಲದೆ, ಅದಕ್ಕೆ ಹೊಂದಿಕೊಳ್ಳುವ ಅನುಕೂಲತೆಯನ್ನು ಕಲ್ಪಿಸಿಕೊಟ್ಟಿಲ್ಲ. ಆದ್ದರಿಂದ ಸಾರ್ವಜನಿಕರಿಂದಲೇ ಸಾಧ್ಯವಾದಷ್ಟು ಹಣವನ್ನು ಪಡೆದು, ಅದನ್ನು ಸಾಧ್ಯವಾದಷ್ಟು ಬೇಗನೆ ಕೈಗಾರಿಕೆಗೆ ತೊಡಗಿಸಬೇಕು, ಹೊಸ ಕೈಗಾರಿಕೆಗಳನ್ನು ಪ್ರಾರಂಭಿಸಬೇಕು, ಹೊಸ ಸಾಧನಗಳನ್ನು ಉಪಯೋಗಿಸಬೇಕು. ಇವೆಲ್ಲವೂ ಸಾಧ್ಯವಾಗಬೇಕಾದರೆ ನಮ್ಮ ಕೈಗಾರಿಕೆಗಳಿಗೆ ಇವುಗಳಿಗೆ ಸಂಬಂಧಪಟ್ಟ ಮತ್ತು ಯೋಜನೆಗೆ ಸಹಕಾರ ಕೊಡಬೇಕು. ಆದರಿಂದ ಸರಿಯಾದ ಪ್ರಚಾರಕಾರ್ಯ ಉದಯಿಸಿ ಸಾರ್ವಜನಿಕ ಯೋಜನೆಯು ಅತ್ಯಾವಶ್ಯಕವೆಂದೂ ಇದು ಪ್ರಜೆಗಳ ಹಿತಕ್ಕಾಗಿ ಮಾಡುವ ಹೊಸ ಪ್ರಯತ್ನವೆಂದೂ ಅದನ್ನು ಸಾಧಿಸಲು ಪ್ರಜೆಗಳ ಸಹಕಾರ ಅವಶ್ಯಕವೆಂದೂ ಅವರಿಗೆ ಮನದಟ್ಟು ಮಾಡಿಕೊಡಬೇಕು. ಆದರೆ ಇದು ಸಾಧ್ಯವಾಗಬೇಕಾದರೆ ಯೋಜನೆಯ ಪ್ರಯೋಜನಗಳು ಪ್ರಜೆಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಸಿಗಬೇಕು. ಆಗ ಮಾತ್ರ ಯೋಜನೆಯ ಪ್ರಯೋಜನಗಳು ಪ್ರಜೆಗಳಿಗೆ ಸಿಗಬೇಕಾದರೆ

ಟ್ಟವನ್ನು ಸಮತೋಲ ಮಾಡಲು ಅನುಕೂಲವಾಗುವುದು. ಇದು ಹಳ್ಳಿಗಳಲ್ಲಿ ಸಾಧ್ಯ. ಕನಿಷ್ಠ ಹಾಗೂ ಅಧಿಕತಮ ಉತ್ಪನ್ನಗಳ ನಡುವೆ ಸಂಬಂಧ ಬರುವಂತೆ ಇನ್ನುಳಿದ ವಿಧಾನಗಳ ಉಪಯೋಗ ಮಾಡಿಕೊಳ್ಳಬೇಕಾಗುವುದು. ಕಳೆದ ಕೆಲವು ವರ್ಷಗಳಲ್ಲಿ ಕಳ್ಳಪೇಟೆಯ ಅಕ್ರಮಗಳಿಂದ, ಸಮಾಜ ವಿಘಾತುಕ ಚಟುವಟಿಕೆಗಳು ಇವೇ ಮೊದಲಾದವುಗಳ ಪರಿಣಾಮವಾಗಿ ಅಸಮಾನ್ಯತೆಗಳು ವೃದ್ಧಿಗೊಳಿಸಲ್ಪಟ್ಟವೆ. ಜನತೆಗೆ ತೀವ್ರ ಪರಿಹಾರವನ್ನೂ ನ್ಯಾಯವನ್ನೂ ತರಬೇಕಾದರೆ ಈ ಅನಿಷ್ಟಗಳನ್ನು ಮಜ್ರ ಮೂಷ್ಟಿಯಿಂದ ಬಗ್ಗು ಬಡಿಯಬೇಕು. ಇವನ್ನು ಮುಂದಿನ ಕಾರ್ಯಕ್ರಮಗಳಲ್ಲಿ ನೀರಾವರಿ ವಿದ್ಯುಚ್ಛಕ್ತಿ, ಒಕ್ಕಲುತನ ಉದ್ಯೋಗಿಗಳ ಸುಧಾರಣೆಗಳಿಗಾಗಿ ವಿಶೇಷ ಲಕ್ಷ್ಯವನ್ನು ಕೊಡಲಾಗುವುದು.

### ಕೂಲಿಕಾರರ ಧೋರಣೆ.

ಪ್ರಗತಿದಾಯಕವಾದ ಶಾಸನಗಳ ಮೂಲಕ ಸರ್ಕಾರವು ಕೂಲಿಕಾರರ ಹಿತರಕ್ಷಣೆಗೆ ಪ್ರಯತ್ನಪಡುತ್ತಿರುವುದು ವೇದ್ಯವಾಗಿದೆ. ಕೂಲಿಕಾರರ ಪರಿಸ್ಥಿತಿಯನ್ನು ಇನ್ನೂ ಉತ್ತಮಪಡಿಸಲು ಅವಕಾಶವಿದೆ. ಕೂಲಿಕಾರರಿಗೆ ವಸತಿ ಸೌಕರ್ಯವನ್ನು ಕಲ್ಪಿಸುವುದು ಅತಿ ಮುಖ್ಯವಾದದ್ದು. ಮೂಲಕರ ಮತ್ತು ಕೂಲಿಕಾರರ ಪರಸ್ಪರ ಸಹಾಯದಿಂದ ಸರ್ಕಾರವು ಈ ಸಮಸ್ಯೆಯನ್ನು ಬಗೆಹರಿಸಲು ಶಕ್ತಿಗೆ ಸಾಧ್ಯವಾದಷ್ಟೂ ಪ್ರಯತ್ನಿಸುತ್ತದೆ. ಹೆಚ್ಚು ಉತ್ಪಾದನೆಯು ಮೂಲಕ ಕೂಲಿಕಾರರ ಜೀವನ ಮಟ್ಟವನ್ನು ಹೆಚ್ಚಿಸಬೇಕು. ಬೇರೆ ದೇಶದವರೊಡನೆ ಹೋಲಿಸಿದಲ್ಲಿ ಭಾರತೀಯನ ದೈನಿಕ ದುಡಿಮೆ ಬಹಳ ಕಡಿಮೆಯಾಗಿದೆ. ಇದಕ್ಕೆ ಕಾರಣಗಳು ಬಹಳವಿರಬೇಕು. ಅವೇನೆಂಬುದನ್ನು ಸಂಶೋಧಿಸಬೇಕು. ರಾಷ್ಟ್ರದ ಹಿತದೃಷ್ಟಿಯಲ್ಲಿ ಹೆಚ್ಚು ಉತ್ಪಾದನೆಗಾಗಿ ಕೂಲಿಕಾರರು ಕಷ್ಟಪಡಬೇಕೆಂಬುದನ್ನು, ಮನೋಗತ ಮಾಡಿಕೊಳ್ಳಬೇಕು. ಹೆಚ್ಚು ಕಾಲ ಮತ್ತು ಹಣ ವ್ಯಯವಾಗದಂತೆ, ಸಾಮಾಜಿಕ ನ್ಯಾಯದ ತತ್ವದಿಂದ, ಕಾಯಿದೆ ಪರಿಭಾಷೆಗಳು, ಉಪಚಾರಗಳಿಂದ ಕೂಡಿರದಂತೆ ಉದ್ಯಮ ಕಲಹಗಳನ್ನು ಪಂಚಾಯಿತರು ತೀರ್ಮಾನಿಸಬೇಕು. ಅಪೀಲು ಹೋಗುವುದನ್ನು ಆದಷ್ಟು ಕಡಿಮೆ ಮಾಡಬೇಕು.

### ಸಾರಿಗೆ.

ರೈಲ್ವೆ ಪ್ರಯಾಣವನ್ನು ಸಾಕಷ್ಟು ಉತ್ತಮ ಪಡಿಸಲಾಗಿದೆ. ಭಾರತದಲ್ಲೇ ರೈಲ್ವೆ ಎಂಜಿನುಗಳನ್ನು ತಯಾರಿಸಲು ಪ್ರಯತ್ನಿಸಲಾಗಿದೆ. ಹಿಂದೂಸ್ಥಾನ ಏರ್‌ಕ್ರಾಫ್ಟ್ ಲಿಮಿಟೆಡ್‌ರವರು ವಾಣಿಜ್ಯುಗಳನ್ನು ತಯಾರಿಸುತ್ತಿದ್ದಾರೆ. ಸ್ವಯಂ ಪೂರ್ಣತೆಯೇ ಗುರಿಯಿದ್ದು, ಈ ದಿಶೆಯಲ್ಲಿ ಪ್ರಗತಿ ಪರ ಪ್ರಯತ್ನವಾಗಬೇಕು. ಈ ಗುರಿಯನ್ನು ಮುಟ್ಟಲು ಬಹಳ ಕಾಲ ಬೇಕಾಗಿದ್ದರೂ, ಆದಷ್ಟು ಉತ್ತಮ ಪಡಿಸಲು ಮತ್ತು ಪ್ರಯಾಣಿಕರಿಗೆ ಸೌಕರ್ಯ ಕಲ್ಪಿಸಲು ಆದರಲ್ಲೂ ಮೂರನೇ ದರ್ಜೆಯ ಪ್ರಯಾಣಿಕರಿಗೆ ಹೆಚ್ಚು ಸೌಕರ್ಯ ಕಲ್ಪಿಸಲು, ಸತತವಾಗಿ ಪ್ರಯತ್ನಿಸಬೇಕು. ಕೆಲವು ರಾಜ್ಯಗಳಲ್ಲಿ ಸಾರಿಗೆಯನ್ನು (ಮೋಟರ್) ರಾಷ್ಟ್ರೀಕರಣ ಮಾಡಲಾಗಿದೆ. ಇದರಿಂದ ಸಾರ್ವಜನಿಕರಿಗೆ ಹೆಚ್ಚು ಅನುಕೂಲವಾಗಿದೆ ಈ ಧೋರಣೆಯನ್ನು ಮುಂದುವರಿಯಬೇಕು.

### ನೇಮಕ.

ಸಾರ್ವಜನಿಕ ಕೆಲಸಗಳಿಗಾಗಿ ನೌಕರರನ್ನು ನೇಮಿಸುವ ವಿಧಾನ ರಾಷ್ಟ್ರೀಯ ಯೋಜನೆಯ ಉದ್ದೇಶಗಳಿಗೆ ಹೊಂದುವಂತಿರಬೇಕು. ರಾಷ್ಟ್ರೀಕರಣವಾದ ಉದ್ದಿಮೆಗಳಲ್ಲಿ, ಅವಶ್ಯವಿದ್ದಲ್ಲಿ ವಿಶೇಷ ಶಿಕ್ಷಣವನ್ನು ಕೊಡಬೇಕು. ಒಳ್ಳೇ ಕೆಲಸಗಳಿಗೆ ಮೆಚ್ಚಿಗೆ ಸಿಗಬೇಕಾದರೆ ಉನ್ನತವಾದ ನೈತಿಕ ಬಲ ಅವಶ್ಯಕ, ಇದಕ್ಕಾಗಿ ಕಾರ್ಯಗತವಾಗುವ ಒಂದು ವಿಧಾನವನ್ನು ಕಂಡು ಹಿಡಿಯಬೇಕು.

### ಆರೋಗ್ಯ.

ಅಂಟುರೋಗಗಳ ಹತೋಟಿಯಿಂದ, ನಿರ್ಮಲೀಕರಣ ಮತ್ತು ಹೆಚ್ಚು ನೀರು ಹೊರೆಯುವಂತೆ ಮಾಡಿರುವುದರಿಂದ, ಸಾರ್ವಜನಿಕ ಆರೋಗ್ಯ ಮುಂದುವರಿದಿದೆ. ಕೆಲವು ಪ್ರದೇಶಗಳಲ್ಲಿ ಮಲೇರಿಯವನ್ನು ಹತೋಟಿಗೆ ತಂದಿದ್ದರಿಂದ ಜಿರಂಭಕ್ಕೆ ಅನುಕೂಲವಾಗಿವೆ. ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ಹಾಗೂ ಉತ್ಪಾದನೆ ದೃಷ್ಟಿಯಿಂದ ಮಲೇರಿಯವನ್ನು ಹತೋಟಿಗೆ ತರುವುದು ಮುಖ್ಯವಾಗಿದ್ದು, ಉತ್ತೇಜಕವಾಗಿರುತ್ತದೆ. ಸಾಯುವ ಪ್ರಮಾಣವು ಕಡಿಮೆಯಾಗಿದ್ದು, ಹೆಚ್ಚು ಕಾಲ ಬಾಳುವ ನಿರೀಕ್ಷೆ ಇರುವುದು, ಸಾರ್ವಜನಿಕ ಆರೋಗ್ಯದಲ್ಲಿ ಮುಂದುವರಿದಿರುವುದನ್ನು ಸೂಚಿಸುತ್ತದೆ.

### ಹಿಂದುಳಿದವರು.

ಪರಿಶಿಷ್ಟ ವರ್ಗದವರನ್ನು, ಗುಡ್ಡಗಾಡಿನವರನ್ನು ಇತರ ಹಿಂದುಳಿದಿರುವವರನ್ನು ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಮುಂಚೆ ತರುವುದು ಭಾರತೀಯ ರಾಜ್ಯಾಂಗದ ಪ್ರಕಾರ ಸರ್ಕಾರದ ವಿಶೇಷ ಕರ್ತವ್ಯವಾಗಿದೆ. ಇದಕ್ಕಾಗಿ ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳು ವಿಶೇಷ ಗಮನ ಕೊಟ್ಟಿವೆ. ಗಾಂಧೀಜಿಯ ಮುಂದಾಳುತ್ವದಲ್ಲಿ ಕಾಂಗ್ರೆಸ್ಸು ಹಿಂದುಳಿದವರನ್ನು ಮೇಲಕ್ಕೆತ್ತುವುದು ತನ್ನ ಮುಖ್ಯ ಗುರಿಗಳಲ್ಲಿ ಒಂದಾಗಿ ಈಗಲೂ ಈ ಕೆಲಸದಲ್ಲಿ ಆದಷ್ಟು ಮುಂದುವರಿಯುತ್ತಾಗಿದೆ. ಹಿಂದುಳಿದವರು ಸಮಾನವಾದ ಆರ್ಥಿಕ ಮತ್ತು ಶೈಕ್ಷಣಿಕ ಅವಕಾಶಗಳನ್ನೂ ಮತ್ತು ಸೌಲಭ್ಯಗಳನ್ನೂ ಇತರರಂತೆ ಪಡೆಯುವ ವರೆಗೂ, ಇವರುಗಳಲ್ಲಿ ವಿಶೇಷತಃ ಗುಡ್ಡಗಾಡಿನವರು ಮುಂದುವರಿಯುವ ವರೆಗೂ ಈ ದಿಶೆಯಲ್ಲಿ ಕೆಲಸವು ನಡೆಯುತ್ತಿರಬೇಕು.

### ಶುದ್ಧೀಕರಣ.

ಲಂಚಕೋರತನದ ಬಗ್ಗೆ ಬಹಳ ಹೇಳಲಾಗುತ್ತಿದೆ. ಸಾಮಾಜಿಕ ಕೇಡುಗಳಿಗಾಗಿ ವಿಧವಿಧವಾದ ವಂಚನೆ, ಲಂಚಕೋರತನಗಳು ಇವೆ. ಈ ಕೇಡನ್ನು ಕೊನೆಗಾಣಿಸಲು ಸರ್ವ ಪ್ರಯತ್ನಪಟ್ಟು, ಎಲ್ಲ ಕ್ರಮಗಳು ಕೂಡಿದ ಒಂದು ವಿಧಾನವನ್ನು ಕಂಡುಹಿಡಿಯಬೇಕು. ಈಗಿರುವ ಮುಖ್ಯ ತೊಂದರೆಯೆಂದರೆ, ಶಾಖೆಯ ವಿಚಾರಣೆ ಮತ್ತು ನ್ಯಾಯಸ್ಥಾನದ ವಿಚಾರಣೆಯಲ್ಲಿ ವಿಲಂಬವಾಗುತ್ತಿರುವುದು. ವಿಳಂಬದಿಂದ ಅಪರಾಧಿಯು ಶಿಕ್ಷೆಯಿಂದ ಪಾರಾಗುವುದಕ್ಕೆ ಕಾರಣವಾಗುತ್ತದೆ.

### ಶಿಕ್ಷಣ

ಶಿಕ್ಷಣ ಮತ್ತು ಸಾರ್ವಜನಿಕ ಆರೋಗ್ಯದ ಮಹತ್ವವನ್ನು ಮಾನ್ಯ ಮಾಡಿದ್ದರೂ, ಎಲ್ಲಿಯು ಪರಿಗೆ ಧನದ ಆಧಾರವು ನಿಯಮಿತವಾಗಿರುವುದೋ, ಅಲ್ಲಿಯು ಪರಿಗೂ ಮುಂಗುವರಿಯಲು ಸಾಧ್ಯವಿಲ್ಲ. ಆದರೂ, ಇಂದಿನ ವಿದ್ಯಾಭ್ಯಾಸದಲ್ಲಿರುವ ಕುಂದನ್ನು ತೆಗೆದು, ವಿದ್ಯಾಭ್ಯಾಸ ಸರಿಯಾದ ಮಾರ್ಗದಲ್ಲಿ ಹೋಗುವಂತೆ ಮಾಡಬೇಕು. ವಿದ್ಯೆಯು ನೌಕರಿ ಸಂಪಾದನೆಗೆ ಪೂತ್ರ ಮಾರ್ಗವೆಂದು ತಿಳಿಯದೆ, ವಿದ್ಯಾರ್ಥಿಯು ಬುದ್ಧಿ ಮತ್ತು ವ್ಯಕ್ತಿತ್ವದ ಬೆಳವಣಿಗೆಗೆ ಕಾರಣವೆಂದು ತಿಳಿಯಬೇಕು. ಮುಂದಿನ ಪೀಳಿಗೆ ಇಂದಿನ ವಿದ್ಯಾಭ್ಯಾಸದಿಂದ ಬಾಳುತ್ತದೆ. ಸಮಾಜಕ್ಕೆ, ಉತ್ಪಾದನೆ ಮತ್ತಿತರ ಅವಶ್ಯಕತೆಗಳಂತೆ ವಿದ್ಯೆಯೂ ಮುಖ್ಯವಾದದ್ದು. ಮೂಲ ಶಿಕ್ಷಣ, ಕೆಲಸದ ಮೂಲಕ ಕಲಿಯುವುದನ್ನು, ಆದಷ್ಟು ಆಚರಣೆಗೆ ತರಬೇಕು. ಪ್ರೌಢ ವಿದ್ಯಾಭ್ಯಾಸದಲ್ಲಿ ದೈಹಿಕ ಕೆಲಸವು ಶಿಕ್ಷಣದ ಒಂದು ಭಾಗವಾಗಬೇಕು. ಅದಿಲ್ಲದಿದ್ದಲ್ಲಿ ಡಿಗ್ರಿ ಅಥವಾ ಡಿಪ್ಲೋಮಾಗಳನ್ನು ಕೊಡಕೂಡದು. ಪ್ರಶಂಸೆ, ಭಕ್ತಿ, ಸತ್ಯ ಸೌಂದರ್ಯಗಳ ವಿವಿಧ ರೂಪಗಳ ಜ್ಞಾನ, ವಿದ್ಯೆಯ ಅವಶ್ಯ ಭಾಗವಾಗಿರಬೇಕು. ಕಲೆ ಮತ್ತು ಸಾಹಿತ್ಯ, ಸಂಗೀತ ಮತ್ತು ನಾಟಕ, ಹಾಡು ವಿಕೆ ಮತ್ತು ನೃತ್ಯ, ಇವುಗಳಿಗೆ ಉತ್ತೇಜನೆ ಕೊಡಬೇಕು.

### 'ಬಿ' ಮತ್ತು 'ಸಿ' ರಾಜ್ಯಗಳು.

ಐತಿಹಾಸಿಕ ಮತ್ತು ಆಡಳಿತದ ಅವಶ್ಯಕತೆಗಳಿಂದ ಭಾರತದ ಕೆಲವು ರಾಜ್ಯಗಳನ್ನು 'ಬಿ' ಮತ್ತು 'ಸಿ' ರಾಜ್ಯಗಳೆಂದು ವಿಂಗಡಿಸಲಾಯಿತು. ಇದು ಸದ್ಯಕ್ಕೆ ಮಾತ್ರವಿರುವುದು. ಇದನ್ನು ಶಾಶ್ವತವಾಗಿರುವುದೆಂದು ತಿಳಿಯಬಾರದು. ಕಳೆದ ವರ್ಷಗಳಲ್ಲಿ ಭಾರತದ ಕೆಲವು ರಾಜ್ಯಗಳು ಬೇರೆ ರೀತಿಯಲ್ಲಿ ಬೆಳೆದುದನ್ನು ಗಮನದಲ್ಲಿಡಬೇಕು ಕೆಲವು ಗಡಿ ಪ್ರದೇಶಗಳು, ಗುಡ್ಡಗಾಡಿನ ಜನರು ವಾಸಿಸುವ ಕೆಲವು ಪ್ರದೇಶಗಳಲ್ಲಿ ವಿಶೇಷ ರೀತಿಯಲ್ಲಿ ಆಡಳಿತ ನಡೆಸಬೇಕು. ಆದಷ್ಟು ತೀವ್ರವಾಗಿ 'ಬಿ' ಮತ್ತು 'ಸಿ' ರಾಜ್ಯಗಳಲ್ಲಿ ಒಂದೇ ಆಡಳಿತ ರೀತಿಯನ್ನಿಡುವುದೇ ಸಾಮಾನ್ಯ ಧೋರಣೆಯಾಗಿದೆ. ಕೆಲವು ರಾಜ್ಯಗಳಲ್ಲಿ ಶಾಸನ ಸಭೆಯಿಲ್ಲದಿರುವುದೇ ಮುಖ್ಯವಾದ ತೊಂದರೆಯಾಗಿದೆ. ಅಂಥಾ ಪ್ರದೇಶಗಳಲ್ಲಿ ಘಟನಾತ್ಮಕವಾದ ಶಾಸನ ಸಭೆಗಳು ಬಂದೊಡನೆ, ಅವಕ್ಕೂ ಮತ್ತು 'ಎ' ರಾಜ್ಯಗಳಿಗೂ ಇರುವ ವ್ಯತ್ಯಾಸಗಳು ಆದಷ್ಟು ಕಣ್ಮರೆಯಾಗುವವು. ಗೌರವಿಸಲೇಬೇಕಾದ ಸಂಪ್ರದಾಯವಿಲ್ಲದಿದ್ದಲ್ಲಿ ಈ ವ್ಯತ್ಯಾಸವಿರಲು ಕಾರಣವಿಲ್ಲ. ಕೆಲವು 'ಸಿ' ರಾಜ್ಯಗಳನ್ನು ಒಂದು ದೊಡ್ಡ ಘಟಕದಲ್ಲಿ ಸಮೀಕರಣ ಮಾಡುವುದನ್ನು ಪರಿಶೀಲಿಸಲಾಗುತ್ತಿದೆ.

### ಪುನರ್ವ್ಯವಸ್ಥೆ.

ಕಳೆದ ನಾಲ್ಕು ವರ್ಷಗಳಿಂದಲೂ ಮೊದಲ ಮತ್ತು ಸಂಪೂರ್ಣ ಗಮನವನ್ನು ಸೆಳೆದಿರುವ ಮುಖ್ಯವಾದ ಸಮಸ್ಯೆಯೆಂದರೆ, ಪಾಕಿಸ್ತಾನದಿಂದ ಬಂದ ನಿರಾಶ್ರಿತರ ಪುನರ್ವ್ಯವಸ್ಥೆ. ಕಳೆದ ಜನಗಣನೆಯ ಸಂಖ್ಯೆಯ ಪ್ರಕಾರ ಪಶ್ಚಿಮ ಪಾಕಿಸ್ತಾನದಿಂದ ೪೬ ಲಕ್ಷ ಜನರೂ, ಪೂರ್ವ ಪಾಕಿಸ್ತಾನದಿಂದ ೭೬ ಲಕ್ಷ ಜನರು ಬಂದಿರಬಹುದೆಂದು ತಿಳಿದುಬಂದಿದೆ. ಪಶ್ಚಿಮ ಪಾಕಿಸ್ತಾನದಿಂದ ಬಂದವರಲ್ಲಿ ೩೦ ಲಕ್ಷ ಜನರು ಗ್ರಾಮಪ್ರದೇಶದ ಜಮೀನಿನ ಒಡೆಯರು ಅಥವಾ ರೈತರು ಇವರಲ್ಲಿ ಪಟ್ಟಣದ ಕೆಲಸವನ್ನು ಅಪೇಕ್ಷಿಸಿದವರನ್ನು ಹೊರತುಪಡಿಸಿದರೆ ಉಳಿದವರು ಒಕ್ಕಲುತನ ಮಾಡುತ್ತಿದ್ದರು. ಪಶ್ಚಿಮ ಪಾಕಿಸ್ತಾನದ, ಉಳಿದ ೫೫ ಲಕ್ಷ ಜನರಲ್ಲಿ ೧೩,೧೦,೦೦ ಜನರಿಗೆ ಶಿಕ್ಷಣಕೊಟ್ಟ ಕೆಲಸ ದೊರಕಿಸಿಕೊಡಲಾಗಿದೆ. ಸುಮಾರು ೨ ಲಕ್ಷ ಜನರು ಸರಕಾರಿ ಸಹಾಯವನ್ನು ಬೇಡಲಿಲ್ಲ. ಇದರಿಂದ ಪಟ್ಟಣದಲ್ಲಿ ೯ ಲಕ್ಷ ಜನರಿಗೆ ಉಳಿಯುವಂತಾಗಿದೆ. ಪೂರ್ವ ಪಾಕಿಸ್ತಾನದಿಂದ ಬಂದ ನಿರಾಶ್ರಿತರ ಸಮಸ್ಯೆ ೧೯೫೦ ರ ಮೊದಲ ಭಾಗದಲ್ಲಿ ತೀವ್ರವಾಗಿದ್ದು ಪುನರ್ವ್ಯವಸ್ಥೆಯ ಯೋಜನೆಗಳನ್ನು ತಯಾರಿಸಲಾಯಿತು. ನಿರಾಶ್ರಿತರಲ್ಲಿ ಅನೇಕರು ಮನೆಗೆ ಹಿಂದಿರುಗಿದರು. ಈಗ ಪೂರ್ವ ಪಾಕಿಸ್ತಾನದಿಂದ ಪಶ್ಚಿಮ ಬಂಗಾಳಕ್ಕೆ ಬರುತ್ತಿದ್ದಾರೆ. ಈ ಪರಿಸ್ಥಿತಿಯನ್ನು ಎದುರಿಸಲು ಸರ್ವಪ್ರಯತ್ನ ಮಾಡಲಾಗಿದೆ. ಈ (ಆರ್ಥಿಕ) ವರ್ಷದ ಕೊನೆಯಲ್ಲಿ ನಿರಾಶ್ರಿತರ ಪರಿಹಾರ ಮತ್ತು ಪುನರ್ವ್ಯವಸ್ಥೆಗಾಗಿ ಸರಕಾರ ೧೪೦ ಕೋಟಿ ರೂ.ಗಳನ್ನು ವೆಚ್ಚಮಾಡಿದಂತಾಗುವುದು. ಇವರಿಗೆ, ೬ ಸಾವಿರ ಎಕರೆ ನಿರಾಶ್ರಿತರ ಹಾಗೂ ಇತರ ಭೂಮಿಯನ್ನು ಕೊಡಲಾಗಿದೆ. ಇದಲ್ಲದೆ ೫೬೦೦ ಮನೆಗಳು, ಅಂಗಡಿಗಳು ಕಾರ್ಖಾನೆಗಳನ್ನು ಒದಗಿಸಲಾಗಿದೆ. ಇವುಗಳಲ್ಲಿ ೩೬೦೦೦ ಮನೆಗಳನ್ನು ಸರಕಾರ ಹೊಸದಾಗಿ ಕಟ್ಟಿಸಿದೆ. ನಿರಾಶ್ರಿತರು ಪಾಕಿಸ್ತಾನದಲ್ಲಿ ಬಿಟ್ಟು ಬಂದ ಆಸ್ತಿಯ ಪ್ರಶ್ನೆ ಮೇಲಿಂದ ಮೇಲೆ ಪ್ರಯತ್ನಪಟ್ಟರೂ, ಬಗೆಹರಿದಿಲ್ಲ. ಶಿಕ್ಷಣಗಟ್ಟಲೆ ಜನರಿಗೆ ಸಂಬಂಧಿಸಿದ ಈ ಪ್ರಶ್ನೆಯನ್ನು ಆದಷ್ಟು ಜಾಗ್ರತೆ ಬಗೆಹರಿಸಲಾಗುವುದು.

ಪೂರ್ವ ಪಂಜಾಬ್, ದಿಲ್ಲಿ, ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಮುಂಬಯಿ ಮತ್ತಿತರ ಪ್ರದೇಶಗಳಲ್ಲಿ ಅನೇಕ ಹೊಸ ಊರುಗಳನ್ನೂ, ವಸಾಹತುಗಳನ್ನೂ ಕಟ್ಟಲಾಗಿದೆ. ಪರಸ್ಪರ ಸಹಾಯದಿಂದ ಆದ ಈ ಕೆಲಸವು ಇಂಥ ಕೆಲಸಗಳಲ್ಲಿ ಮೂದಲಾಗಿದೆ. ಇಂಥ ಹೊಸ ಊರು, ವಸಾಹತುಗಳಲ್ಲಿ ಉತ್ಪಾದನೆಯ ಕಾರ್ಯವು ತೃಪ್ತಿಕರವಾಗಿ ನಡೆಯುತ್ತಿದೆ. ನಿರಾಶ್ರಿತರ ಪುನರ್ವ್ಯವಸ್ಥೆಗಾಗಿ ಹೂಡಿರುವ ಕೆಲಸಗಳು ಅಪೂರ್ವವಾಗಿದೆ. ಕಳೆದ ೩ ವರ್ಷಗಳಲ್ಲಿ ಯುರೋಪ ಹಾಗು ಏಶಿಯಾಗಳ ಅನೇಕ ಭಾಗಗಳು ನಿರಾಶ್ರಿತರ ಸಮಸ್ಯೆಯನ್ನು ಎದುರಿಸುತ್ತ ಬಂದಿವೆ. ಪುನರ್ವ್ಯವಸ್ಥೆಯ ಕಾರ್ಯದಲ್ಲಿ ನಾವು ಹೊಂದಿದ ಪ್ರಗತಿಯು ಸಮರ್ಪಕವಾಗಿದೆ. ಆದರೆ, ನಾವಿನ್ನೂ ಬಹಳ ನಿರಾಶ್ರಿತರಿಗೆ, ಆದರಲ್ಲೂ ಪಶ್ಚಿಮ ಬಂಗಾಳದಲ್ಲಿ ಹೆಚ್ಚು ಸಹಾಯ ಮಾಡಬೇಕಾಗಿದೆ. ಪಶ್ಚಿಮ ಮತ್ತು ಪೂರ್ವ ಪಾಕಿಸ್ತಾನದಿಂದ ಬಂದ ನಿರಾಶ್ರಿತರಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುವುದನ್ನು ಅವಶ್ಯಕವಾಗಿ ಮುಂದುವರಿಸಬೇಕಾಗಿದೆ.

# ಕೊ ಡ ಗು

ಕಾ. ೨೦-೭-೧೯೬೧ನೇ ಶುಕ್ರವಾರ

## ಕಾಂಗ್ರೆಸ್ ಅಧಿವೇಶನ.

ಕಾಂಗ್ರೆಸ್ ಪ್ರೆಸಿಡೆಂಟ್ ಟ್ಯಾಂಡನ್ನರು ರಾಜೀನಾಮೆ ಇತ್ತು ಜವಾಹರರು ಕಾಂಗ್ರೆಸ್ ಪ್ರೆಸಿಡೆಂಟರಾಗಬೇಕು. ಕಾಂಗ್ರೆಸ್ಸಿನಿಂದ ಸಿಡಿದು ಹೋದವರನ್ನು ಹಿಂದಕ್ಕೆ ತರುವ ಯತ್ನವಾಗಬೇಕು, ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯು ಪುನರ್ರಚನೆಯಾಗಬೇಕು ಹೀಗೆ ಒಂದರ ಮೇಲೊಂದೆಂಬಂತೆ ಹಲವು ಧ್ವನಿಗಳು ಕೇಳುತ್ತಿದ್ದ ಸಮಯದಲ್ಲಿ ಬೆಂಗಳೂರಿನಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಿತು. ಕಾಂಗ್ರೆಸ್ ಪಂಸ್ಥೆಯು ಸಡಿಲಾಗಿ ಅದರಲ್ಲಿ ಸತ್ವ ಕಡಿಮೆಯಾಗಿದೆ; ಇಂದು ಕಾಂಗ್ರೆಸ್ಸೆಂದರೆ ನೆಹರೂರವರೊಬ್ಬರ ವ್ಯಕ್ತಿತ್ವವಲ್ಲಿರುವ ಸಂಸ್ಥೆ. ನೆಹರೂರವರು ಬಿಟ್ಟರೆ ಕಾಂಗ್ರೆಸ್ಸಿನಲ್ಲಿ ತಿರುಳಿಲ್ಲವೆಂಬ ಅಭಿಪ್ರಾಯ ಹಲವರದ್ದು ಇತ್ತು. ಆದರೆ ಬೆಂಗಳೂರಿನಲ್ಲಿ ನಡೆದ ಅಧಿವೇಶನದಲ್ಲಿ ಕಾಂಗ್ರೆಸು ಶಿಥಿಲಗೊಂಡಿದ್ದರೂ ಅದರಲ್ಲಿ ಇನ್ನೂ ಜೀವನವಿದೆ. ಇನ್ನೂ ಅದು ಭಾರತೀಯರ ಏಕಮೇವ ರಾಜಕೀಯ ಸಂಸ್ಥೆಯೂಗಿದೆ ಎಂಬುದು ಸ್ಪಷ್ಟವಾಯಿತು. ಈ ಅಧಿವೇಶನದಲ್ಲಿ ತೀರ್ಮಾನವಾದ ಅತಿ ಪ್ರಾಮುಖ್ಯ ವಿಚಾರವೆಂದರೆ ಕಾಂಗ್ರೆಸ್ಸಿನ ಚುನಾವಣಾ ಪ್ರಣಾಳಿಕೆ. ಕಾಂಗ್ರೆಸ್ ಅಧಿವೇಶನವು ಕೂಡುವ ಮೊದಲೇ ಪಂಡಿತ ನೆಹರೂರವರು ತಮ್ಮ ಆಡಳಿತದ ವರದಿಯೊಂದನ್ನು ಕಾಂಗ್ರೆಸ್ಸಿಗೆ ಒಪ್ಪಿಸಿದರು. ಈ ವರದಿಯ ತಳಹದಿಯಲ್ಲಿಯೇ ಕಾಂಗ್ರೆಸ್ ಚುನಾವಣಾ ಘೋಷಣೆಯು ರೂಪುಗೊಂಡಿದೆ. ಈ ಚುನಾವಣಾ ಘೋಷಣೆಯನ್ನು ಹೆಚ್ಚಿನ ತಿದ್ದುಪಡಿಗಳಿಲ್ಲದೆ ಕಾಂಗ್ರೆಸು ಅಂಗೀಕರಿಸಿತು. ಕಾಂಗ್ರೆಸ್ಸಿನಲ್ಲಿ ಒಡಕು ಹೆಚ್ಚಾಗಿ ಪಕ್ಷಭೇದಗಳ ಬೆಳೆದು ಬೆಂಗಳೂರು ಅಧಿವೇಶನದಲ್ಲಿ ಕಾಂಗ್ರೆಸಿನ ಸಮಾಧಿಯಾಗುವೆಂದು ಕಲ್ಪಿಸಿದ್ದವರಿದ್ದರು. ಅಂಥವರಿಗೆ ಕಾಂಗ್ರೆಸು ಇನ್ನೂ ಬಲಯುತವಾಗಿದೆ; ದೇಶದ ಜವಾಬ್ದಾರಿಯನ್ನು ಹೊತ್ತು ಬೇರೆ ಎಲ್ಲಾ ಪಕ್ಷಗಳಿಗಿಂತಾ ಸೂಕ್ಷ್ಮವಾಗಿ ದುಡಿಯಬಲ್ಲ ದೆಂಬ ವಿಶ್ವಾಸವನ್ನು ತಾಳ್ದೆಸೆ ಚೆಲ್ಲಿದೆ.

ನಂತರ ನಡೆದ ಗುಪ್ತ ಅಧಿವೇಶನದಲ್ಲಿ ಕಾಂಗ್ರೆಸಿನಿಂದ ಹೊರಗಡೆ ಇರುವವರು ಹಿಂದಕ್ಕೆ ಬರಲು ಬಾಗಿಲು ಸದಾ ತೆರೆದಿಡುವ ನಿರ್ಣಯವಾಗಿದೆ. ಈ ವರೆಗೆ ಕಾಂಗ್ರೆಸಿನಿಂದ ಹೊರಗೆ ಹೋದವರು ಹಿಂದಕ್ಕೆ ಬಾರದು ದೂರದ ಮಾತೇ ಆಗಿದ್ದರೂ ಕಾಂಗ್ರೆಸಿನಲ್ಲಿ ಅಸ್ಪೃಶ್ಯರಾಗಿದ್ದು ಹೊರ ಹೋಗಲು ಇಚ್ಛಿಸುತ್ತಿದ್ದವರು ಹಾಗೆ ಹೋಗುವ ಅಗತ್ಯವಿಲ್ಲವೆಂದೂ ಕಾಂಗ್ರೆಸಿನಲ್ಲೇ ಇದ್ದು ತಮ್ಮ ಸೇವೆ ಸಲ್ಲಿಸಬಹುದೆಂದೂ ಈ ಅಧಿವೇಶನ ಸ್ಪಷ್ಟ ಪಡಿಸಿದೆ. ಅಧಿವೇಶನದ ಕಾರ್ಯಕಲಾಪಗಳು ಅವಶ್ಯ ಹೃದಯದಲ್ಲಿ ಹೊಸ ಆಶೆ ಚೈತನ್ಯಗಳನ್ನು ತುಂಬಿದೆ.

ಆದರೆ ಒಂದು ಮಾತು ಮಾತ್ರ ನಿಜ ಇಂದು ಪಂಡಿತ ಜವಹರರೇ ಕಾಂಗ್ರೆಸ್; ಕಾಂಗ್ರೆಸ್ಸೇ ಪಂಡಿತ ನೆಹರೂ ಎನ್ನಲಡ್ಡಿಯಿಲ್ಲ. ಬೆಂಗಳೂರು ಅಧಿವೇಶನವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಜನತೆ ತಮ್ಮ ತತ್ವನಿಯಮಗಳನ್ನು ಬಿಟ್ಟರೂ ಪಂಡಿತರು ಮುಂದಾಳ್ತನವನ್ನು ಕಳಕೊಳ್ಳಲು ತಯಾರಿಲ್ಲವೆಂಬುದು ತಿಳಿದುಬಾರದಿರದು. ಕಾಂಗ್ರೆಸ್ ಚುನಾವಣಾ ಘೋಷಣೆಗೆ ಸುಮಾರು ಧೂಪು ತಿದ್ದುಪಡಿಗಳು ಸೂಚಿಸಲ್ಪಟ್ಟಿದ್ದರೂ ನೆಹರೂರವರು ಒಪ್ಪದ ಒಂದೇ ತಿದ್ದುಪಡಿ ಪಾಸಾಗಲಿಲ್ಲ. ನೆಹರೂರವರು ತಮ್ಮ ವರ್ತನೆಗಳಿಂದ ನಿರಂಕುಶ ಸರ್ವಾಧಿಕಾರಿಯಂತೆ ವರ್ತಿಸಿದರೂ ಜನತೆ ಅವರ ಅಭಿಪ್ರಾಯಕ್ಕೇ ಜೈ ಎಂದಿತು.

ಸ್ವಾತಂತ್ರ್ಯದ ನಂತರ ಕಾಂಗ್ರೆಸು ತಪ್ಪು ರೀತಿ ವರ್ತಿಸಿದೆ ಅಲ್ಲಲ್ಲಿ ಎಡವಿದೆ. ಆದರೆ ನಡೆಯುವ ಕಾಲೇ ಎಡವುದಲ್ಲದೆ ಕುಳಿತ ಕಾಲಲ್ಲವೆಂಬುದನ್ನು ಎಲ್ಲರೂ ಮನಸ್ಸಿನಲ್ಲಿಡಬೇಕು. ಎಡವಿದ ಕಾಲು ಮುಂದೆ ಎಚ್ಚರಿಕೆಯಿಂದ ನಡೆಯುವಂತೆ ತನ್ನ ತಪ್ಪಿನಿಂದ ಹೊಸ ಪಾಠ ಕಲಿತು ಕಾಂಗ್ರೆಸು ಮುಂದರಿಯಬೇಕು. ಕಾಂಗ್ರೆಸಿಗೆ ನೆಹರೂರವರಂಥಾ ಮುಂದಾಳೊಬ್ಬರಿರುವದು ಅದರ ಭಾಗ್ಯ. ಆದರೆ ಒಬ್ಬ ಮುಂದಾಳುವಿನಿಂದಲೇ ಒಂದು ಸಂಸ್ಥೆಯೂಗಲಾರದು. ಕಾಂಗ್ರೆಸು ಉಳಿಯಬೇಕಾದರೆ ತನ್ನ ತತ್ವ, ನಿಷ್ಠೆಗಳ ಮೇಲಲ್ಲದೆ ಮುಂದಾಳುಗಳು ಕೆಲವರ ಹೆಸರಿನ ಮೇಲಲ್ಲ. ಕಾಂಗ್ರೆಸು ಪ್ರಜಾಪ್ರಭುತ್ವವಾಗಬೇಕಾದರೆ ತನ್ನ ಆತ್ಮಶಕ್ತಿ ಹಾಗೂ ಪರಿಶುದ್ಧ ವರ್ತನೆಗಳಿಂದಲ್ಲದೆ ಬೇರೆ ಮಾರ್ಗವಿಲ್ಲ ಆದ್ದರಿಂದ ಕಾಂಗ್ರೆಸಿಗರು ತಮ್ಮ ಆತ್ಮನಿರೀಕ್ಷೆಮಾಡಿ, ಬೆಳೆದಿರುವ ಕೊಳೆಯನ್ನು ತೊಳೆದುಕೊಂಡು ಪುನಹ ಕಾಂಗ್ರೆಸ್ಸನ್ನು ಜನಾನುರಾಗಿ ಜನತಾಸಂಸ್ಥೆಯೂಗಿ ಕಟ್ಟಲಿ.

## ವರ್ತಮಾನ.

ವಿರಾಜಪೇಟೆಗೆ ಈ ವಾರ ೬ ಇಂಚು ೨೭ ಸೆಂಟು ಮಳೆ ಬಿದ್ದಿದೆ.

ಕೊಡಗು ಸರಕಾರಿ ಕಾಲೇಜು ಯೂನಿಯನಿನ ಕಾರ್ಯದರ್ಶಿಯಾಗಿ ಶ್ರೀ ಮುಂಡಚಾಡಿರ ಎಂ. ದೇವಯ್ಯನವರನ್ನೂ ಸಹ ಕಾರ್ಯದರ್ಶಿನಿಯಾಗಿ ಶ್ರೀಮತಿ ಅಜ್ಜಾಮಾಡ ದೇಚಮ್ಮನವರನ್ನೂ ಆರಿಸಲಾಗಿದೆ.

ಕೊಡಗು ವ್ಯವಸಾಯ ಅದಾಯ ತೆರಿಗೆಯ ಆಫೀಸರಾಗಿ ಮದ್ರಾಸಿನಲ್ಲಿ ಇನ್ಸ್‌ಕಮ್‌ಟ್ಯಾಕ್ಸ್ ಆಫೀಸರಾಗಿದ್ದ ಶ್ರೀ. ಸಿ. ಆರ್. ಕೃಷ್ಣರಾವ್ ಇವರನ್ನು ನೇಮಿಸಲಾಗಿದೆ.

ಕೊಡಗು ಸರಕಾರಿ ಕಾಲೇಜು ವಿದ್ಯಾರ್ಥಿ ಕೂಟದ ಉದ್ಘಾಟನಾ ಸಮಾರಂಭವು ಕೊಡಗಿನ ಚೀಫ್ ಕಮೀಷನರವರಿಂದ ಈ ದಿನ ನಡೆಯುವುದು.

ತಾ. ೧೨ರಲ್ಲಿ ನಾಪೋಕ್ಲು ಪ್ರೌಢಶಾಲಾ ಚರ್ಚಾಕೂಟದ ಉದ್ಘಾಟನಾ ಸಮಾರಂಭದಲ್ಲಿ 'ಸ್ವತಂತ್ರ ಭಾರತದಲ್ಲಿ ವಿದ್ಯಾರ್ಥಿಗಳ ನಡತೆ ಹೇಗಿರಬೇಕು' ಎಂಬ ವಿಚಾರ ಅರ್ಥಗರ್ಭಿತವಾದ ಭಾಷಣವನ್ನು ಪೊನ್ನಂಪೇಟೆ ಪ್ರೌಢ ಶಾಲಾ ಅಧ್ಯಾಪಕರಾದ ಶ್ರೀ ಬಿ ಸೂರ್ಯನಾರಾಯಣರಾವ್, ಇವರು ಮಾಡಿದರು. ಮುಖ್ಯೋಪಾಧ್ಯಾಯರಾದ ಶ್ರೀ. ಎಂ. ಎ. ಬೆಳ್ಯಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಅದೇ ದಿನ ನಾಪೋಕ್ಲು ಜ್ಯೂಬಿಲಿ ಕ್ಲಬ್ಬಿನ ಉಪಯುಕ್ತ ಶ್ರೀ ಸೂಯ್ಯನಾರಾಯಣರಾಯರು 'ಮಹಾ ಭಾರತದಲ್ಲಿ ಕರ್ಣನ ಪಾತ್ರ ಮತ್ತು ಅವನ ಜೀವನ' ಸಮಸ್ಯೆ'ಗಳ ಕುರಿತು ಭಾಷಣ ಮಾಡಿದರು.

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ವಿಶೇಷ ನಿಮಿತ್ತ ಕಳೆದ ವಾರ ಬೆಂಗಳೂರಿಗೆ ಬಂದಿದ್ದ ಭಾರತ ಪ್ರಧಾನ ಮಂತ್ರಿ ನೆಹರೂ, ಗೃಹ ಮಂತ್ರಿ ರಾಜಗೋಪಾಲಾಚಾರಿ ಮತ್ತು ಕಾಂಗ್ರೆಸ್ ಅಧ್ಯಕ್ಷ ಪುರುಷೋತ್ತಮದಾಸ್ ಟ್ಯಾಂಡನ್ ಇವರುಗಳನ್ನು ಕೊಡಗಿನ ಪ್ರತ್ಯೇಕವಾದಿ ಪಕ್ಷದ ಪ್ರತಿನಿಧಿಗಳಾಗಿ ಶ್ರೀಗಳಾದ ಬಿ. ಎಂ. ಕಾರ್ಯಪ್ಪ ಮತ್ತು ಪಿ. ಐ. ಬೆಳ್ಯಪ್ಪ ಇವರುಗಳು ಭೇಟಿ ಮಾಡಿ ಕೊಡಗಿನ ಭವಿಷ್ಯತ್ತುವ ಬತ್ತು ಮುಂಬರುವ ಪಂಚಾವಣೆಯನ್ನು ಕುರಿತು ಪ್ರಸ್ತಾಪಿಸಿ ಬಂದಿರುವರಾಗಿ ತಿಳಿಯಬರುತ್ತದೆ.

ತಾ. ೯-೭-೬೧ರಲ್ಲಿ ಕೆದಕಲ್ಲುನಲ್ಲಿ ಪುತ್ತು ಬಾರಿ ಎಂಬ ಮೂಪಿಳೆಯು ತಂದೆಯ ಹತ್ತಿರ ವಾಸವಿದ್ದ ತನ್ನ ಹೆಂಡತಿ ಅವಿಾನ ಳನ್ನು ಹಿಂದಕ್ಕೆ ಕರೆಯಲಾಗಿ ಬಾರದ್ದರಿಂದ ಕುಳಿತಿದ್ದ ಆಕೆಯನ್ನು ಎಳೆದುಕೊಂಡು ಹೋಗಿ ಸ್ವಲ್ಪ ದೂರದಲ್ಲು ಕುತ್ತಿಗೆಯನ್ನು ಕತ್ತರಿಸಿ ಕೊಂದು ಹಾಕಿದರ ಪ್ರಯುಕ್ತ ಪೊಲೀಸಿಗೆ ಪುಕಾರು ಆಗಿ ತಫಿಕೆಯಲ್ಲಿದೆ. ಅಪರಾಧಿಯನ್ನು ದಸ್ತಗಿರಿ ಮಾಡಲಾಗಿದೆ

ನಾಪೋಕ್ಲು ಹೈಸ್ಕೂಲಿನಿಂದ ಕಳೆದ ಸ್ಕೂಲ್ ಫೈನಲ್ ಪರೀಕ್ಷೆಗೆ ಕೂತ ವಿದ್ಯಾರ್ಥಿಗಳಲ್ಲಿ ಶ್ರೀಗಳಾದ ಸಿ. ಕೆ. ಭೀಮಯ್ಯ ಮತ್ತು ಬಿ. ಕೆ. ಪುಟ್ಟಣ್ಣ ಇವರುಗಳು ತೇರ್ಗಡೆಯಾಗಿರುವರೆಂದು ಇತ್ತಲಾಗಿ ತಿಳಿದುಬಂದಿದೆ. ಇದರಿಂದ ಪರೀಕ್ಷೆಗೆ ಕೂತ ೬೯ ವಿದ್ಯಾರ್ಥಿಗಳಲ್ಲಿ ೨೩ ತೇರ್ಗಡೆಯಾದಂತಾಯಿತು.

## ಲಿಯೊಖತರಿಗೆ ನೆಹರೂರವರ ಉತ್ತರ.

ನೆಹರೂರವರು ಬೆಂಗಳೂರಿನಲ್ಲಿ ಐವತ್ತು ಸಾವಿರ ಜನರು ಕೂಡಿದ ಸಾರ್ವಜನಿಕ ಸಭೆಯೊಂದರಲ್ಲಿ ತಾ. ೧೬ರಲ್ಲಿ ಮಾತನಾಡಿದರು. ಆ ಸಮಯದಲ್ಲಿ ಲಿಯೊಕತರು ಹಿಂದೀ ಸೈನ್ಯಗಳು ಪಾಕಿಸ್ತಾನದ ಗಡಿಯನ್ನು ಮುಟ್ಟಿವೆ ಎಂದು ವೈಕ್ತಪಡಿಸಿದ ಗಾಬರಿಯನ್ನು ಶುದ್ಧ ಬೋಗಸ್ ಟಾ ಟೀಕೆ ಎಂದು ಅಲ್ಲಗಳೆದರು.

ಮುಂದುವರಿದು ನೆಹರೂ ಕೆಳಗಿನಂತೆ ಹೇಳಿದರು. "ಪಾಕಿಸ್ತಾನದ ಗಡಿಯಲ್ಲಿ ಅಲ್ಪ ಸ್ವಲ್ಪ ಹಿಂದೀ ಸೈನ್ಯದ ಸಂಚಾರ ವಿದ್ದುದೇನೊ ನಿಜ. ಇದು ತಮ್ಮ ಗಡಿನಾಡು ಪ್ರದೇಶಗಳಿಗೆ ಸಂಪೂರ್ಣ ಸುರಕ್ಷಿತತೆಯನ್ನು ಕೊಡಲು ತೆಗೆದುಕೊಳ್ಳುತ್ತಿರುವ ಮುನ್ನೆಚ್ಚರಿಕೆ ಅಷ್ಟೆ.

ಕಳೆದ ತಿಂಗಳಿನಲ್ಲಿ ಭಾರತದ ಒಕ್ಕೂಟ ಪ್ರದೇಶವಾದ ಕಾಶ್ಮೀರದಲ್ಲಿ ಪಾಕಿಸ್ತಾನವು ಅನೇಕ ಸಾರಿ ಅಕ್ರಮಣಕ ಧಾಳಿಯನ್ನು ಮಾಡಿತು. ಸಂಘಟಿತ ಧಾಳಿಗಾಗಿ ಪಾಕಿಸ್ತಾನದಲ್ಲಿ ಸಿದ್ಧತೆ ನಡೆಯುತ್ತಿದೆ ಎಂಬುದನ್ನು ನಾವು ಬಲ್ಲೆವು. ಇಂತಹ ಗಂಭೀರ ಪರಿಸ್ಥಿತಿಯನ್ನು ಎದುರಿಸಲು ತಕ್ಕ ಮುಂಜಾಗ್ರತೆಯನ್ನು ನಮ್ಮ ಸರಕಾರವು ತೆಗೆದುಕೊಳ್ಳದಿದ್ದರೆ ಕರ್ತವ್ಯ ಲೋಪವಾದೀತು.

ಪಾಕಿಸ್ತಾನದ ಪೂರ್ವ ಪಶ್ಚಿಮ ಗಡಿಗಳಲ್ಲಿರುವ ಸೈನ್ಯದ ಬಲವೆ ಹೊದಲೇ ಹೆಚ್ಚಿಲ್ಲವೆ? ಅವರು ಭಾರತದ ಗಡಿಯ ಕಡೆಗೆ ಸಾಗಿ ಬರುತ್ತಿಲ್ಲವೆ? ಲಿಯೊಕತರೇ ಹೇಳಲಿ. ಬ್ರಿಟಿಷ್ ಮಿಲಿಟರಿ ಸಲಹೆಗಾರರ ಸಲಹೆ ಮತ್ತು ಬ್ರಿಟನ್ನಿನ ಮಿಲಿಟರಿ ನಿವೃತ್ತ ಅಧಿಕಾರಿಗಳ ಚಟುವಟಿಕೆ ಇವುಗಳಿಂದ ಪಾಕಿಸ್ತಾನದ ಪರಿಸ್ಥಿತಿ ಗಂಭೀರತೆಯು ಇಷ್ಟೊಂದು ಕಾವುಗೊಂಡಿತೆಂದು ಹೇಳಲು ವ್ಯಸನವಾಗುತ್ತಿದೆ.

ಪಾಕಿಸ್ತಾನಕ್ಕೆ ಒಳ್ಳೆಯ ಬುದ್ಧಿ ಬರುವುದೆಂಬ ನಿರೀಕ್ಷಣೆಯ ಮೇಲೆ ನಾವು ನಮ್ಮ ಸೈನ್ಯದ ಕೆಲವು ಭಾಗವನ್ನು ವಿಸರ್ಜಿಸಿದೆವು. ಬುದ್ಧಿ ಬರುವುದಕ್ಕೆ ಬದಲು ಪಾಕಿಸ್ತಾನವು ತನ್ನ ಸೈನ್ಯ ಬಲವನ್ನು ಹೆಚ್ಚಿಸಿಕೊಂಡಿತು. ಕಳೆದಾರು ತಿಂಗಳಿನಿಂದಲೂ ಯುದ್ಧದ ಮಾತೇ ಪಾಕಿಸ್ತಾನದ ತುಂಬ ತುಂಬಿಕೊಂಡಿದೆ ಪ್ರತಿದಿನವೂ ಪ್ರತಿ ವರ್ತಮಾನ ಪತ್ರವೂ ಭಾರತದ ವಿರುದ್ಧ ಯುದ್ಧ ಹೂಡುವುದರ ಬಗ್ಗೆ ಬರೆಯದೆ ಇರುವುದಿಲ್ಲ. ಪಾಕಿಸ್ತಾನದ ಹೊಣೆಗಾರ ಧುರೀಣರೂ ಸಹ ಭಾರತದ ಮೇಲೆ ಯುದ್ಧ ಮಾಡುವ ವಿಚಾರವಾಗಿ ಮಾತನ್ನಾಡುತ್ತಿರುವರು. ಪಾಕಿಸ್ತಾನದ ಮಂತ್ರಿಗಳೂ ಸಹ ಯುದ್ಧವನ್ನು ಬೇಡುತ್ತಿರುವರು ಯುದ್ಧಕ್ಕಾಗಿ ಇಂತಹ ಪ್ರಚಂಡ ಪ್ರಚಾರ ಪತ್ರಿಕಾ ದೇಶದಲ್ಲಾದರೂ ನಡೆಯುತ್ತಿರುವುದೇ ಪಡೆಯ ಬಲ್ಲುದೇ ನನಗೆ ಸಂದೇಹವಾಗಿದೆ.

ಈ ವಿಷಯದಲ್ಲಿ ನಾವು ಪಾಕಿಸ್ತಾನದ ಹಾಗೂ ಯುಕ್ತರಾಷ್ಟ್ರ ಸಂಘದ ಲಕ್ಷವನ್ನು ಆಗಿಂದಾಗ್ಗೆ ಸೆಳೆಯುತ್ತಲೇ ಇದ್ದೇವೆ. ಆದರೂ ಇದು ನಡೆಯುತ್ತಲೇ ಇದೆ. ಪಾಕಿಸ್ತಾನವು ಇಂತಹ ಅಪ ಪ್ರಚಾರವನ್ನು ತಡೆಯಬಲ್ಲ ಶಕ್ತಿಯನ್ನೇ ಕಳೆದುಕೊಂಡಂತಿರುವುದು. "ಒಂದು ಕಡೆ ಪಾಕಿಸ್ತಾನದ ಮುಖ್ಯ ಮಂತ್ರಿ ಶಾಂತಿಯ ಸವಿ ಮಾತನಾಡುತ್ತಿದ್ದರೆ ಮತ್ತೊಂದು ಕಡೆ ಯುದ್ಧ, ಯುದ್ಧವೆಂಬ ಭೀಕರ ಸ್ವರ ಕೂಗಿ ಕೇಳಿಕೊಳ್ಳುತ್ತಿದೆ. ಯುದ್ಧ ಬೇಡವೆಂಬ ಘೋಷಣೆಯನ್ನು ಸೂಚಿಸಿದ ಲಿಯೊಕತರೇ-ಆ ಘೋಷಣೆಯನ್ನು ವರ್ಣಮುಕ್ಕಿಸಿದರು.

ಕಾಶ್ಮೀರದಲ್ಲಿ ಪಾಕಿಸ್ತಾನದ ಅಕ್ರಮಣ ಈಗಲೂ ನಡೆಯುತ್ತಿದೆ ಎಂಬುದನ್ನೇ ಮಹಾಶಯರು ಮರೆತಿರುವೆರೇನೋ. ಕಾಶ್ಮೀರದ ಭಾಗವೊಂದು ಅರ್ಥಾತ್ ಭಾರತದ ಒಂದು ಭಾಗವನ್ನು ಪಾಕಿಸ್ತಾನದ ಸೈನ್ಯಗಳು ಆಕ್ರಮಿಸಿಕೊಂಡಿಲ್ಲವೇ? ಇದನ್ನು ನ್ಯಾಯವೆಂದು ಯಾವ ದೇಶದ ಕಾಯ್ದೆಯು ಸಮರ್ಥಿಸುವುದೋ ಅದನ್ನು ನಾವಿನ್ನು ನೋಡಿ ತಿಳಿದುಕೊಳ್ಳಬೇಕಾಗಿದೆ. ಮೆಲ್ಲ ಮೆಲ್ಲನೆ ನೆರೆಯ ರಾಷ್ಟ್ರದ ಮೇಲೆ ಅಕ್ರಮಣ ಪ್ರವೇಶ ಮಾಡುತ್ತಲೇ ಅದರ ಸ್ನೇಹವನ್ನು. ಯಾಚಿಸುವುದಾಲಿ ಯೊಕತರ ಧೋರಣವಾದರೆ ಅದು ನಮ್ಮ ಧೋರಣವಲ್ಲ.

ಯಾವುದೇ ರೀತಿಯಲ್ಲಿ ನಾವು ಪಾಕಿಸ್ತಾನದ ಮೇಲೆ ಧಾಳಿ ಮಾಡುವುದಿಲ್ಲ. ಆದರೆ ಪಾಕಿಸ್ತಾನವು ಭಾರತದ ಯಾವುದೇ ಪ್ರದೇಶದ ಮೇಲೆ ಧಾಳಿ ಮಾಡಿದರೆ ಮಾತ್ರ ಆಗ ನಾವು ನಮ್ಮ ಸರ್ವ ಶಕ್ತಿಯಿಂದ ಅದನ್ನು ಎದುರಿಸುವೆವು ಎಂಬುದನ್ನು ಮತ್ತೆ ಮತ್ತೆ ಒತ್ತಿ ಹೇಳುತ್ತೇನೆ."

—೦೦೦—

## ಓದುಗರ ಓಲೆಗಳು.

### ಈ ತಾತ್ಸಾರವೇಕೆ?

ಕೊಡಗಿನ ವಿದ್ಯಾ ಇಲಾಖೆಯಲ್ಲಿ ಖಾಲಿ ಬೀಳುವ ಸ್ಥಳಗಳನ್ನು ತುಂಬುವ ಬಗ್ಗೆ ಸರಕಾರವು ಬಹು ವಿಳಂಬ ಮಾಡುತ್ತಿದೆ. ಹಲವು ಶಾಲೆಗಳು ಸರಿಯಾದ ಅಧ್ಯಾಪಕರಿಲ್ಲದೆ ತೊಂದರೆಗೊಳಗಾಗಿವೆ. ನಿದರ್ಶನಕ್ಕೆ ಪ ಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಇಬ್ಬರು ಅಧ್ಯಾಪಕರೊಬ್ಬರು ಮೊನ್ನೆಯೇ ಮೈಸೂರಿನ ಮುಖ್ಯೋಪಾಧ್ಯಾಯರಾಗಿ ಕೋಗಿಲೆತೆರವಾದ ಸ್ಥಳವನ್ನಿನ್ನೂ ತುಂಬಲ್ಪಟ್ಟಿಲ್ಲ ಇದೇ ಶಾಲೆಯ ರಜೆಯಲ್ಲಿರುವ ಅಧ್ಯಾಪಕರೊಬ್ಬರ ಬದಲಿಗೂ ಯಾರನ್ನೂ ನೇಮಿಸಿಲ್ಲ. ಹೀಗೆ ಹಲವು ಶಾಲೆಗಳಲ್ಲಿ ಅಧ್ಯಾಪಕರಿಲ್ಲದೆ ತೊಂದರೆಯುಗುತ್ತಿದೆ. ಶಾಲೆ ಪ್ರಾರಂಭವಾಗಿ ಅನೇಕ ದಿನಗಳಾದರೂ. ಬಹುಶಃ ಈ ಇನ್ನೊಂದು ವಾರದಿಂದ ಮಕ್ಕಳಿಗೆ ಮಳೆಗಾಲದ ರಜೆಯೂ ಬರುವುದು. ಹೀಗಾದರೆ ಶಾಲಾ ಪಠಗಳು ಹೇಗೆ ತಾನೆಯಾಗಿ ಪಡೆಯಲು ಸಾಧ್ಯ? ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬಾರದಿದ್ದರೆ ಪೋಷಕರೂ ಸರಕಾರವು ದೊಚ್ಚಿಗೆದ್ದು ಟೀಕಿಸುವರು. ಶಾಲೆಯಲ್ಲಿ ಪಾಠ ಹೇಳಲು ಸಂಯೂಡಿ ಅಧ್ಯಾಪಕರಿಲ್ಲದಿದ್ದರೆ ಫಲಿತಾಂಶ ಉತ್ತಮವಾಗುವದು ಹೇಗೆ? ಇದೂ ಖರ್ಚು ಕಡಿಮೆ ಮಾಡುವ ಯೋಜನೆಯೇ? ಬಡರೈತನ ಹಿತಕ್ಕೆ ಬಾರದ ಕೋಟಗಟ್ಟಲೆ ಹಣ ಸರಕಾರದ ಬೊಕ್ಕಸದಲ್ಲಿ ಇದ್ದೇನು ಫಲ! ಕೊಡಗಿನಲ್ಲಿ ವಿದ್ಯಾವಂತರಾದ ಪದವೀಧರರು ನಿರುದ್ಯೋಗಿಗಳಾಗಿರುವಾಗ ಸರಕಾರಕ್ಕೆ ಜಪ ಸಿಗುವದಲ್ಲವೆಂದೂ ಹೇಳುವಹಾಗುವದಿಲ್ಲ. ಹಾಗಾದರೆ ವಿದ್ಯಾ ಇಲಾಖೆಯ ಬಗ್ಗೆ ಈ ತಾತ್ಸಾರವೇಕೆ? 'ವಿದ್ಯಾಭಿಮಾನಿ'

---

### ಕಳ್ಳನ ಕಾಳಸಂತೆ.

ಸಿನೇಮಾ ಮಂದಿರದ ಹತ್ತಿರ ರಸ್ತೆಯಲ್ಲಿ ನಿಂತಿದ್ದೆ. ಹತ್ತಿರದಲ್ಲಿ ಮಲಬಾರು ಹೊಟೇಲೊಂದಿದೆ. ಹೊಟೇಲಿಗೆ ಎದುರುಗಡೆ ರಸ್ತೆಯ ಪಕ್ಕದಲ್ಲಿ ಚಿಕ್ಕದೊಂದು ಆಂಗಡಿಯೊಳಗೆ ಚಿಕ್ಕ ದೀಪವೊಂದು ಮಿನುಗುತಿತ್ತು. ಆಂಗಡಿಯಲ್ಲಿ ಹಲವು ಮುರುಕಲು ಸೈಕಲುಗಳಿದ್ದವು. ಈ ದೀಪವಿದ್ದ ಕೊಟಡಿಗೆ ತಾಗಿ ಮತ್ತೊಂದು ಕೊಟಡಿ ಇದೆ. ಅಲ್ಲಿರುವ ಮೇಜಿನ ಮೇಲೆ ಇದ್ದ ಎರಡು ಕಡಿಯುವ ಗ್ಲಾಸುಗಳನ್ನು ರಸ್ತೆಯಿಂದಲೇ ನೋಡಬಹುದಿತ್ತು. ಎದುರುಗಡೆ ರಸ್ತೆಯಲ್ಲಿ ಬೂದು ಬಣ್ಣದ ಕಾರೊಂದು ನಿಂತಿತ್ತು. ಈ ಚಿಕ್ಕ ಆಂಗಡಿಯೊಳಗೆ ಜನರು ಒಬ್ಬೊಬ್ಬರಾಗಿ, ಇಬ್ಬಿಬ್ಬರಾಗಿ ಹೋಗಿ ಬರುತ್ತಿದ್ದರು. ರಾತ್ರಿ ಆರುವರೆ ಗಂಟೆ ಇರಬಹುದು. ಏನಿರಬಹುದೆಂದು ನನಗೆ ಆಶ್ಚರ್ಯವಾಗಿತ್ತು. ಒಳಗೆ ಹೋದವರೊಬ್ಬರು ನನ್ನ ಪಕ್ಕಕ್ಕಾಗಿ ದಾಟಿದರು. ಸಾರಾಯಿಯ ವಾಸನೆಯು ಮೂಗು ಮುಚ್ಚುವಂತೆ ಬಡಿಯಿತು. ಹೌದು, ಈ ಕೊಟಡಿಯಲ್ಲಿ ಸಾರಾಯಿಯ ಕಾಳಸಂತೆ ನಡೆಯುತಿತ್ತು. ಪೇಟೆಯ ರಾಜಾಸ್ತೆಯ ಪಕ್ಕದಲ್ಲಿ ಪೋಲೀಸರು ಅತಿತ್ಸ ಸುತ್ತುವ ಶಹರಿನಲ್ಲಿ! ಅದರೆ ಇದು ಅಧಿಕಾರಿಗಳ ಕಣ್ಣಿಗೆ ಬೀಳುವದಿಲ್ಲವೇ? 'ರವಿರಾಮರಾವು'

---

### ಕಾಲೇಜ್ ಎಂಡೋಮೆಂಟ್ ನಿಧಿ.

ಕೊಡಗು ಸರಕಾರಿ ಕಾಲೇಜು ಪ್ರಾರಂಭವಾದಾಗ ವಿದ್ಯಾಭಿಮಾನಿಗಳಾದ ಕೆಲವು ಶ್ರೀಮಂತರು ಮತ್ತು ಸಂಸ್ಥೆಗಳು ಉದಾರವಾಗಿ ಧನ ಸಹಾಯವನ್ನು ಮಾಡಿ ಅದರ ಬಡ್ಡಿಯಿಂದ ಯೋಗ್ಯ ವಿದ್ಯಾರ್ಥಿಗಳಿಗೆ ಸಹಾಯ ಕೊಡುವ ಏರ್ಪಾಡು ಮಾಡಿದ್ದಾರೆ. ಈ ಎಂಡೋಮೆಂಟ್ ನಿಧಿಯಲ್ಲಿ ಸುಮಾರು ೨೫೦೦೦ ಹಣವಿದೆ. ಈಗ ಕಾಲೇಜು ಪ್ರಾರಂಭವಾಗಿ ಇದು ಮೂರನೇ ವರ್ಷ ನಡೆಯುತ್ತಿರುವದಾಗಿದೆ. ಆದರೆ ಈ ಎಂಡೋಮೆಂಟುಗಳಿಂದ ಬರುವ ಹಣವನ್ನು ಯಾವ ವಿದ್ಯಾರ್ಥಿಗೂ ಕೊಟ್ಟಿರುವದಿಲ್ಲ. ಈ ಎಂಡೋಮೆಂಟುಗಳಿಗೆ ಬೇಕಾದ ನಿಯಮಾವಳಿಗಳು ತಯಾರಾಗಿವೆಯೋ ಸಂಶಯವಾಗಿದೆ. ಇದಕ್ಕೆ ಎಂಡೋಮೆಂಟ್ ಸಮಿತಿಯೂಗಿದ್ದರೆಯಾರು ಅದರ ಸದಸ್ಯರು? ಯೋಗ್ಯ ವಿದ್ಯಾರ್ಥಿಗಳಿಗೆ ಯಾವ ರೀತಿಯ ಸಹಾಯ ಮಾಡಲು ಏರ್ಪಡಿಸಿದ್ದಾರೆ. ಎಂಡೋಮೆಂಟುಗಳನ್ನು ಕೊಟ್ಟ ಮಹಾಶಯರು ಈ ರೀತಿ ಯಾರಿಗೂ ಪ್ರಯೋಜನವಾಗದಂತೆ ಹಣವನ್ನು ಇಟ್ಟುಕೊಳ್ಳಬೇಕೆಂದು ಆಶಿಸಿರಲಿಲ್ಲ. ಇನ್ನಾದರೂ ಸಂಬಂಧಿಸಿದ ಅಧಿಕಾರಿಗಳು ಇದರ ಬಗ್ಗೆ ನಿಗಹಿಸಿ ತಕ್ಕ ಏರ್ಪಾಡುಗಳನ್ನು ಶೀಘ್ರ ಮಾಡಬೇಕಿದೆ.

'ನಿರೀಕ್ಷಕ.'

---

## TENDERS FOR PEPPER ON VINES

Tenders are invited for the sale of standing pepper crop for the year 1951-52 of Athur Estate, Sunticoppa, Coorg. Interested persons or parties may write to the below mentioned address. Tender applications will be opened on 30th july at 10 A. M. at the office of the Estate. Successful bidder will have to deposit 50% of the value on the spot. Tender envelops must be marked 'Tender'.

*Manager,*
ATHUR ESTATE
Sunticoppa, Coorg.

---

## ಒಳ್ಳೆ ಮೆಣಸು ಫಸಲು ಮೂರಾಟಕ್ಕಿದೆ.

ಸಂಟಿಕೊಪ್ಪದ ಆತ್ಮೂರು ತೋಟದಲ್ಲಿಯ ೧೯೫೧-೫೨ರ ಸಾಲಿನ ಒಳ್ಳೆಮೆಣಸು ಫಸಲನ್ನು ಕೊಂಡುಕೊಳ್ಳಲಿಚ್ಚಿಸುವವರು ಈ ಕೆಳಗಿನ ಅಡ್ರೆಸಿಗೆ ತಮ್ಮ ಟೆಂಡರು ಕಳುಹಿಸಬಹುದು. 'ಟೆಂಡರು ಆರ್ಜಿಗಳನ್ನು ತೋಟದ ಆಫೀಸಿನಲ್ಲಿ ಕಾರೀಕು ೩೦-೭-೫೧ರ ಬೆಳಿಗ್ಗೆ ೧೦ಗಂಟೆಗೆ ತೆರೆಯಲಾಗುವದು. ಟೆಂಡರು ಕಳುಹಿಸುವವರು ಲಕೋಟೆಯ ಮೇಲೆ 'ಟೆಂಡರು' ಎಂದು ಬರೆದಿರಬೇಕು. ಟೆಂಡರು ಪರಿಶೀಲನೆಯಲ್ಲಿ ಜಯಶೀಲರಾದವರು ನೌಕ್ಯದ ಶೇಕಡ ೫೦ರಷ್ಟನ್ನು ಅಲ್ಲೇ ಡಿಪಾಜಿಟ್ಟು ಮಾಡತಕ್ಕದ್ದು.

*Manager,*
ATHUR ESTATE
Sunticoppa, Coorg.

---

## PEELIBETTA ESTATE ORANGE CROP FOR SALE ON TREES
### Season 1951-52.

Those interested in purchasing please communicate with Proprietor, Peelibetta Estate, for permission to inspect and for further particulars before 31st August 1951. About 60 acres bearing a good crop. Also about 6,000 Doddan guddha Kents basket plants for sale. Price Rs. 160/- per thousand.

A. A. RODRIGUES.
*Ammatti P. O., Coorg.*

---

## ಟಿಂಬರು ಮೂರಾಟಕ್ಕಿದೆ

(೧) ಮೈಳು ಸಾವಿರ ಫೀನ ಆಡಿ 'ಸಾಫ್ಟ್ ವುಡ್' ತೊಲೆಗಳು ಮತ್ತು ಸಾವಿರ ಫೀನ ಆಡಿ ಚಿಕ್ಕ ಸೈಜಿನ ಕತ್ತರಿಸಲ್ಪಟ್ಟ ಮರದ ತುಂಡುಗಳು ಮೂರಾಟಕ್ಕಿವೆ. ಕೊಂಡು ಕೊಳ್ಳಲಿಚ್ಛಿಸುವವರು ತಾ ೨೫-೭-೫೧ರೊಳಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವದು. ಈ ಮರಗಳು ಪರಿಶೀಲನೆಗೆ ಚೆಟ್ಟಳ್ಳಿಯಲ್ಲಿಯು ಕಾಫಿ ರೈಸಜ್ ಸಬ್ ಸ್ಟೇಶನಿನಲ್ಲಿ ದೊರೆಯುವವು.

ಸುಪರಿಂಟೆಂಡೆಂಟ್
ಕಾಫಿ ರೈಸಜ್ ಸಬ್ ಸ್ಟೇಶನ್
ಚೆಟ್ಟಳ್ಳಿ, ಕೊಡಗು.

—೦೦೦—

## ಮಹಿಳಾ ಸಮಾಜ, ನಾಫೋಕ್ಲು.
### ಶಿಶುವಿಹಾರ ಸ್ಥಾಪನೆ.

ಕಾರೀಕು ೧೩-೭-೫೧ನೇ ಶುಕ್ರವಾರ ಪ್ರಾತಃಕಾಲ ೮-೩೦ಗಂಟೆಗೆ ನಾಫೋಕ್ಲಿನ ಮಹಿಳಾ ಸಮಾಜದವರು ಒಂದು ಶಿಶುವಿಹಾರವನ್ನು ಸ್ಥಾಪಿಸಿರುವರು. ಶ್ರೀ ಎಂ. ಎ. ಚಂಗಪ್ಪನವರು ಆ ದಿನದ ಕಾರ್ಯಕಲಾಪಗಳಿಗೆ ಅಧ್ಯಕ್ಷರಾಗಿದ್ದು ಶಿಶುವಿಹಾರವನ್ನು ತೆರೆಯುವ ಶುಭಕಾರ್ಯವನ್ನು ಜರಗಿಸಿದರು. ಸಮಾಜದ ಕಾರ್ಯದರ್ಶಿಯವರು ತಮ್ಮ ವರದಿಯಲ್ಲಿ ಈ ರೀತಿಯೆಂದರು.

'ನಮ್ಮ ತ್ವರಿತದ ಆಮಂತ್ರಣವನ್ನು ಮನ್ನಿಸಿ ಈ ಶುಭಕಾರ್ಯವನ್ನು ಯಶಸ್ವಿಯಾಗಿ ಮಾಡಲು ಆಗಮಿಸಿದ ನಿಮಗೆಲ್ಲರಿಗೂ ಸುಸ್ವಾಗತವನ್ನು ಬಯಸುತ್ತೇನೆ. ಈ ನಮ್ಮ ಮಹಿಳಾ ಸಮಾಜವು ರಿಜಿಸ್ಟರ್ ಆಗಿರುವ ಸಹಕಾರ ಸಂಸ್ಥೆಯು. ಮಹಿಳೆಯರ ಪುನೋಭಿವೃದ್ಧಿಯನ್ನು ಸಾಧಿಸುವದೇ ಇವರ ಗುರಿಯಾಗಿರುವುದಾದರೂ ಮುಂದಿನ ಜನಾಂಗವಾಗಲಿರುವ ಶಿಶುಗಳ ಶಿಕ್ಷಣಕ್ಕಾಗಿ ಒಂದು ಶಿಶುವಿಹಾರವನ್ನು ಸ್ಥಾಪಿಸಬೇಕೆಂಬ ಉದ್ದೇಶವನ್ನು ಕೂಡ ಇಟ್ಟುಕೊಂಡಿದ್ದೆವು. ಕೆಲವು ಕಾಲ ನಿದ್ರಾವಸ್ಥೆಯಲ್ಲಿದ್ದ ಈ ಸಮಾಜವನ್ನು ನಮ್ಮ ಹಿಂದಿನ ಮುಖ್ಯೋಪಾಧ್ಯಾಯರಾದ ಶ್ರೀ ಪಿ ಎಂ. ಉತ್ತಪ್ಪನವರ ಪತ್ನಿ ಶ್ರೀಮತಿ, ಪಟ್ಟಡ ಅಕ್ಕನ್ನವನವರು ಎಚ್ಚರಿಸಿ ತಾನೇ ಅದರ ಅಧ್ಯಕ್ಷರಾಗಿ ಅತಿ ಉಲ್ಲಾಸದಿಂದ ಕೆಲಸ ಮಾಡಿ ಜನ ಜಾಗೃತಿಯುಂಟಾಗುವಂತೆ ಮಾಡಿದ್ದು ಮಾತ್ರವಲ್ಲದೆ ಸಮಾಜಕ್ಕಾಗಿ ಒಂದು ಕಟ್ಟಡವನ್ನು ನಿರ್ಮಿಸಲು ದ್ರವ್ಯಸಂಗ್ರಹ ಕೆಲಸ ಚುರುಕಾಗಿ ನಡೆದು ಈಗ ರೂ. ೨೫೬೦/- ಸಂಗ್ರಹವಾಗಿದೆಯೆಂದು ತಿಳಿಸಲು ಸಂತೋಷಪಡುತ್ತೇನೆ ಈ ನಮ್ಮ ಕಾರ್ಯದಲ್ಲಿ ನಮಗೆ ಪ್ರೋತ್ಸಾಹನವನ್ನೂ ಸಹಾಯವನ್ನೂ ಇತ್ತ ಸಹಕಾರ ಸಂಘಗಳ ರಿಜಿಸ್ಟ್ರಾರ್ ಸಾಹೇಬರವರಿಗೂ ನಮ್ಮ ನಾಫೋಕ್ಲಿನ ಸಹಕಾರ ಇನ್ಸ್‌ಪೆಕ್ಟರವರಿಗೂ ನಾವು ಕೃತಜ್ಞರಾಗಿದ್ದೇವೆ. ಅಲ್ಲದೆ ಇಲ್ಲಿಯ ಹೈಸ್ಕೂಲಿನ ಅಧ್ಯಾಪಕರೆಲ್ಲರೂ ನಾನಾ ರೂಪಗಳಿಂದ ಸಹಾಯವನ್ನಿತ್ತು ನಮ್ಮನ್ನು ಪ್ರೋತ್ಸಾಹ ಮಾಡುತ್ತಿರುವುದಕ್ಕೆ ಅವರೆಲ್ಲರಿಗೂ ಕೃತಜ್ಞರಾಗಿರುತ್ತೇವೆ.

ಯೋಗ್ಯ ನಿವೇಶನವು ದೊರೆತೊಡನೆ ಕಟ್ಟಡದ ಕೆಲಸ ಪ್ರಾರಂಭಿಸಬೇಕೆಂಬ ಹಂಬಲ ಕಾರ್ಯಕಾರಿ ಮಂಡಳಿಯವರಿಗೆ ಇದೆ ಐದು ವರ್ಷದೊಳಗಿನ ಮಕ್ಕಳಿಗೆ ನಮ್ಮ ಶಾಲೆಗಳಲ್ಲಿ ಪ್ರವೇಶವಿಲ್ಲದಿರುವುದರಿಂದಲೂ ಶಿಶುಗಳ ಶಿಕ್ಷಣವು ಅತ್ಯಂತ ಅವಶ್ಯವೂ ಪ್ರಾಮುಖ್ಯವೂ ಆಗಿರುವುದರಿಂದಲೂ ನಮ್ಮ ಕೊಡಗು ದೇಶದ ಕೆಲವು ಕಡೆಗಳಲ್ಲಿ ಖಾಸಗಿ ಸಂಸ್ಥೆಗಳು ಶಿಶುವಿಹಾರಗಳನ್ನು ತೆರೆದು ಕೆಲಸ ಮಾಡುತ್ತಿರುವರು. ನಾವೂ ಈ ದಿನ ಈ ಕಟ್ಟಡದೆಲ್ಲಿ ಒಂದು ಶಿಶುವಿಹಾರವನ್ನು ಪರೀಕ್ಷಾರ್ಥವಾಗಿ ತೆರೆದಿರುತ್ತೇವೆ ಕಾಲ ಕ್ರಮದಲ್ಲಿ ಈ ಬಾಡಿಗೆ ಕಟ್ಟಡದ ಬದಲು ಸ್ವಂತ ಭವನವನ್ನು ಕಟ್ಟಿಸಿಕೊಂಡು ಶಿಶುವಿಹಾರಕ್ಕೆ ಬೇಕಾದ ಎಲ್ಲ ಸಲಕರಣೆಗಳನ್ನೂ ಒದಗಿಸಿಕೊಂಡು ಈ ಸಂಸ್ಥೆಯನ್ನು ಆದರ್ಶವಾಗಿ ಪೋಷಿಸುವುದು ನಮ್ಮ ಗುರಿಯಾಗಿದೆ. ಆದರೆ ಆ ಗುರಿಯನ್ನು ಸಾಧಿಸಲು ಪೋಷಕರಾದ ತಮ್ಮೆಲ್ಲರ ಸಹಕಾರ ಸಹಾನುಭೂತಿಗಳು ಅಗತ್ಯವಾಗಿ ಬೇಕಾಗಿವೆ. ಪ್ರಾರಂಭದಲ್ಲಿ ನಮ್ಮಲ್ಲಿ ದ್ರವ್ಯತೋರಿ ಬಹುದಾದ ಕುಂದು ಕೊರತೆಗಳನ್ನು ಎಣಿಸದೆ ತಮ್ಮ ಮಕ್ಕಳನ್ನು ಕಳುಹಿಸಿ ಪ್ರೋತ್ಸಾಹಿಸಲು ಒಪ್ಪಿರುವ ತಮಗೆಲ್ಲರಿಗೂ ನಾವು ಕೃತಜ್ಞರಾಗಿದ್ದೇವೆ. ಈ ದಿನದ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲು ಒಪ್ಪಿರುವ ಶ್ರೀ ಎಂ. ಎ ಚಂಗಪ್ಪನವರಿಗೆ ನಾವು ತುಂಬಾ ಉಪಕೃತರು. ಶಿಶುವಿಹಾರವು ಎಡೆಬಿಡದೆ ನಡೆದು ಅಭಿವೃದ್ಧಿಪಡೆಯುವಂತೆ ದೇವರು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ'. ನಂತರ ಅಧ್ಯಕ್ಷರು ಭಾಷಣ ಮಾಡುತ್ತಾ ಹೀಗೆಂದರು—'ಕೊಡಗು ವಿದ್ಯಾಭ್ಯಾಸದಲ್ಲಿ ತುಂಬಾ ಮುಂದುವರಿದಿದೆ. ಇಲ್ಲಿ ವಿದ್ಯಾವಂತರ ಸಂಖ್ಯೆಯೂ, ಅಕ್ಷರಸ್ಥರ ಶೇಕಡವಾರನ್ನೂ ಹಿಂದೂದೇಶದ ಇತರ ಕಡೆಗಳೊಡನೆ ಹೋಲಿಸಿ ನೋಡಿದರೆ ಬಹಳ ಉತ್ತಮವಾಗಿದೆ. ಆದರೂ ಇಲ್ಲಿ ಶಿಶುಗಳ ಶಿಕ್ಷಣಕ್ಕಾಗಿ ಶಿಶುವಿಹಾರಗಳಿಲ್ಲದಿದ್ದುದು ಒಂದು ಕೊರತೆಯಾಗಿತ್ತು. ಆದರೆ ಇತ್ತೀಚೆಗೆ ಸಹಕಾರ ಇಲಾಖೆಯವರ ಮುಂದಾಳ್ತನದಲ್ಲಿ ಜನ್ಮತಳೆದು ಕಣ್ತೆರೆದು ಮಡಿಕೇರಿ,

ವೀರಾಜಪೇಟೆ, ಮತ್ತು ಸೋಮವಾರಪೇಟೆಗಳಲ್ಲಿ ಶಿಶುವಿಹಾರಗಳನ್ನು ತೆರೆದು ಪ್ರಯೋಜನ ಹೊಂದುತ್ತಲಿದ್ದಾರೆ. ಈ ದಿನ ನೀವು ಸಹ ಇಲ್ಲಿ ಒಂದು ಶಿಶುವಿಹಾರವನ್ನು ಸ್ಥಾಪಿಸುತ್ತಿರುವುದು ಸಂತೋಷದ ವಿಷಯ.

ಶಿಶು ಶಿಕ್ಷಣವು ಎಷ್ಟು ಪ್ರಾಮುಖ್ಯವಾಹ್ಮೆಂದು ಹೇಳಿ ತೀರದು. ಮುಂದಿನ ಸಕಲ ಶಿಕ್ಷಣಕ್ಕೂ ಅದು ಅಸ್ತಿಭಾರದಂತಿದೆ. ಶಿಶುವು ತನ್ನ ಜೀವನದ ಮೊದಲಿನ ಐದು ವರ್ಷಗಳಲ್ಲಿ ಹೊಂದಿಕೊಳ್ಳುವ ಅನುಭವಗಳು ಮುಂದಿನ ಜೀವನದ ಮೇಲೆ ಅತಿ ಮಹತ್ತರವಾದ ಪ್ರಭಾವವನ್ನು ಬೀರಿ ಜೀವನವನ್ನು ರೂಪಿಸುವುದರಲ್ಲಿ ಸಂದೇಹವಿಲ್ಲ. ನಮ್ಮ ಮನೆಗಳಲ್ಲಿ ಶಿಶುಗಳ ನೈಸರ್ಗಿಕವಾದ ಮಾನಸಿಕ ಬೆಳವಣಿಗೆಗೆ ಏಡೆಯಿಲ್ಲ. ಅವುಗಳ ಸ್ವಾಭಾವಿಕ ಚಟುವಟಿಕೆಗಳನ್ನು ರಚನಾತ್ಮಕವಾಗಿ ಮಾಡುವ ವಿಹಾರಾಡುಗಳು ನಮ್ಮ ಮನೆಗಳಲ್ಲಿಲ್ಲದಿರುವುದರಿಂದ ಅವುಗಳ ಚಟುವಟಿಕೆಗಳಿಂದ ನಮಗೆ ತೊಂದರೆಯಾಗಿ ನಾವು ಅಂತಹ ಚಟುವಟಿಕೆಗಳನ್ನು 'ಪುಂಡು' ಅಥವಾ 'ತಂಟೆ'ಯೆಂದು ತಿಳಿದು ಅವುಗಳನ್ನು ಗದರಿಸಿ, ಶಿಕ್ಷಿಸಿ, ಅವುಗಳ ಬೆಳವಣಿಗೆಯನ್ನು ಕುಂದಿಸುತ್ತೇವೆ. ಶಿಶುವಿಹಾರದಲ್ಲಿ ಶಿಶುವಿನ ಸ್ವಾಭಾವಿಕ ಚಟುವಟಿಕೆಗಳಿಗೆ ಎಡೆಕೊಡುವದು ಮಾತ್ರವಲ್ಲ ಅಂತಹ ಚಟುವಟಿಕೆಗಳಿಂದ ಶಿಶುವಿನ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಪರಮೌಷಧಿಯು ಪ್ರಯೋಜನವಾಗುವಂತೆ ಕಾರ್ಯಕ್ರಮವನ್ನು ರೂಪಿಸಿರುತ್ತಾರೆ. ಆದ್ದರಿಂದ ಶಿಶುವಿಹಾರದ ಪ್ರಯೋಜನದ ವಿಷಯದಲ್ಲಿ ಯಾರೂ ಸಂದೇಹಪಡಲು ಕಾರಣವಿಲ್ಲ; ಬದಲು ಈ ನಾಡಿನಲ್ಲಿ ಒಂದು ಶಿಶುವಿಹಾರ ತೆರೆಯಲ್ಪಡುವುದಕ್ಕೆ ನೀವೆಲ್ಲರೂ ಹೆಮ್ಮೆ ಪಡಬೇಕಷ್ಟೆ. ನಿಮ್ಮ ಈ ಪ್ರಯತ್ನಗಳು ಫಲಕೊಡಲಿ ಮತ್ತು ಈ ಶಿಶುವಿಹಾರವು ಸರ್ವತೋಮುಖವಾಹ ಅಭಿವೃದ್ಧಿಯನ್ನು ಪಡೆಯಲೆಂದು ಹಾರೈಸುತ್ತೇನೆ'

---


## ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿತ್ತು.

| | | |
|---|---|---|
| ಅಧಿಕೃತ ಶೇರು ಭಂಡವಾಳ | ರೂ. | 10,00,000. |
| ವಸೂಲಾದ ಶೇರು ಮೊಬಲಗು | ರೂ. | 1,99,400. |
| ಕ್ಷೇಮನಿಧಿ | ರೂ. | 59,000. |
| ಇತರ ನಿಧಿಗಳು | ರೂ. | 36,000. |

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದ

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಜೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೆನಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು.
ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,
ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಮ್ಯಾನೇಜ್.



## ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ಸಪ್ಲೈಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 320-0-0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.
6. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆಮಾಡುವ ಪಂಪುಗಳು (Spraying Pumps)
7. ¾" ½" ⅜" ⅓" ¼" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.
(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52-45


# ಪಾಕಿಸ್ಥಾನದ ದುಸ್ಸಾಹಸ

'ಪೂರ್ವ ಪಂಜಾಬಿನ ಮತ್ತು ಜಮ್ಮು ಕಾಶ್ಮೀರದ ಗಡಿಯಲ್ಲಿ ಭಾರತದ ಸೈನ್ಯಗಳು ಹೇರಳವಾಗಿ ಬರತೊಡಗಿವೆ. ಹಿಂದೀ ಸೈನ್ಯದ ನೂರಕ್ಕೆ ೯೦ ರಷ್ಟು ಸೈನ್ಯ ಪಾಕಿಸ್ತಾನದ ಪೂರ್ವ ಮತ್ತು ಪಶ್ಚಿಮದ ಗಡಿಯಲ್ಲಿ ಬಂದಿದೆ. ಈ ರೀತಿ ಮುನ್ನುಗ್ಗಿ ಬರುತ್ತಿರುವ ಮಹಾ ಸೈನ್ಯದಿಂದ ಉಂಟಾಗುವ ಬೆದರಿಕೆಯನ್ನು ತಪ್ಪಿಸಲು ಈ ಸೈನ್ಯಗಳನ್ನು ಹಿಂದಕ್ಕೆ ಕರೆಸಿಕೊಳ್ಳಬೇಕೆಂದು ಭಾರತದ ಮುಖ್ಯ ಮಂತ್ರಿ ಶ್ರೀ ನೆಹರೂ ರವರಿಗೆ ತಂತಿ ಮಾಡಿರುವೆನು' ಹೀಗೆಂದು ಪಾಕಿಸ್ತಾನದ ಮುಖ್ಯ ಮಂತ್ರಿ ಅವರಿಂದ ಪತ್ರಿಕಾ ಪಂಡಿತೋತ್ತಮರಲ್ಲಿ ಸಾರಿದರು.

ಈ ವಿಷಯವನ್ನು ಭದ್ರತಾಮಂಡಲಕ್ಕೆ ತಿಳಿಸುವಂತೆ ತಮ್ಮ ಪ್ರತಿನಿಧಿಗಳಿಗೆ ತಾರು ಮಾಡಿರುವುದಾಗಿಯೂ ಇವರು ಪತ್ರಿಕಾ ಪರಿಷತ್ತಿನಲ್ಲಿ ತಿಳಿಸಿದರು. ಯು.ಎನ್.ಓ. ಸಂಘದ ಕಾಶ್ಮೀರ ಪ್ರತಿನಿಧಿಯೂದ ವಾ. ಫ್ರಾಂಕ ಗ್ರಹಾಂರವರಿಗೂ ಅಮೇರಿಕಾ ಮೊದಲಾದ ಅಪ್ತ ರಾಷ್ಟ್ರಗಳಿಗೂ ಈ ವಿಷಯವನ್ನು ತಿಳಿಸಿರುವದಾಗಿಯೂ ಲಿಯೂಕತರು ಹೇಳಿದರು. ಕೇವಲ ನಾಲ್ಕು ಗಂಟೆಗಳ ಅವಧಿಯನ್ನು ಕೊಟ್ಟ ಲಿಯೂಕತರು ಅವಸರದ ಪತ್ರಿಕಾ ಪರಿಷತ್ತನ್ನು ಕರೆದರು. ಪ್ರಶ್ನೆಯೊಂದಕ್ಕೆ ಉತ್ತರ ಕೊಡುತ್ತಾ ಪಾಕಿಸ್ತಾನವು ತನ್ನ ಸುರಕ್ಷಿತೆಯ ಬಗ್ಗೆ ಮುಂಜಾಗ್ರತೆಯನ್ನು ತೆಗೆದುಕೊಂಡಿರುವುದಾಗಿಯೂ ಹೇಳಿದರು. ಮುಖ್ಯ ಮಂತ್ರಿಲಿಯೂಕತರು ಆಫಘಾನಿಸ್ತಾನದ ಅಧಿಕಾರಿಗಳೊಂದಿಗೆ ಅತಿ ಮುಖ್ಯವಾದ ಮಾತುಕತೆಗಳನ್ನು ಆಡಿದರೆಂಬುದಾಗಿ ಗೊತ್ತಾಗಿದೆ. ಪಾಕಿಸ್ತಾನದ ಗಡಿರಕ್ಷಣೆಯನ್ನು ಆಫಘಾನಿಸ್ತಾನದ ಸಹಾಯದಿಂದ ಬಲಪಡಿಸುವುದನ್ನು ಕುರಿತೇ ಮಾತುಕತೆಗಳಾಗಿವೆಯೆಂದು ಕರಾಚಿಯ "ಟೈಮ್ಸ್" ಪತ್ರಿಕೆ ಬರೆದಿರುವುದಷ್ಟೆ. ಈ ದಿಶೆಯಲ್ಲಿ ಆಫಘಾನಿ ಗಡಿಯ ವಿಚಾರದಲ್ಲಿ ಒಂದು ಹೊಸ ಒಪ್ಪಂದ ಬರುವ ನಿರೀಕ್ಷಣೆಯೂ ಇರುವುದೆಂದೂ ಈ ಪತ್ರಿಕೆಯೂ ಹಿಷ್ಕರಿಸಿರುವುದು. ಅವರು ಪತ್ರಿಕಾ ಪರಿಷತ್ತಿನಲ್ಲಿ ಕೊಟ್ಟ ಪತ್ರಿಕಾ ಪ್ರಕಟನೆ ಈ ಕೆಳಗಿನಂತಿದೆ.

ಪೂರ್ವ ಪಂಜಾಬ್ ಮತ್ತು ಜಮ್ಮು ಕಾಶ್ಮೀರಗಳಲ್ಲಿ ಭಾರತದ ಸೈನ್ಯವು ದೊಡ್ಡ ಪ್ರಮಾಣದಲ್ಲಿ ಕೇಂದ್ರೀಕರಿಸಲ್ಪಡುತ್ತಿದೆ. ಈ ಸೈನ್ಯಗಳ ಚಲಾವಣೆಗಳಿಂದ ಪಾಕಿಸ್ತಾನ ಗಡಿಗಳಲ್ಲಿ ಭಾರತದ ಸೈನ್ಯಗಳು ಕೇಂದ್ರೀಕೃತವಾಗಿವೆ. ಪಶ್ಚಿಮ ಪಾಕಿಸ್ತಾನದ ಮೇಲೆ ಸುಲಭವಾಗಿ ದಾಳಿ ಮಾಡುವಷ್ಟು ಸಮೀಪಕ್ಕೆ ಆ ಸೈನ್ಯಗಳು ಬಂದಿವೆ. ಪಾಕಿಸ್ತಾನದ ಭದ್ರತೆಗೂ ಮತ್ತು ಅಂತರ್ ರಾಷ್ಟ್ರೀಯ ಶಾಂತಿಗೂ ಇದು ಧಕ್ಕೆ ತರುವಂಥಾದ್ದಾಗಿದೆ. ಪಾಕಿಸ್ತಾನ ಗಡಿ ಭಾಗಗಳಲ್ಲಿ ಶೀಘ್ರವಾಗುತ್ತಿರುವ ಈ ಸೈನ್ಯಗಳಿಂದುಂಟಾದ ಗಂಡಾಂತರವನ್ನು ತಪ್ಪಿಸುವ ಸಲುವಾಗಿ ಮತ್ತು ಅಂತರ ರಾಷ್ಟ್ರೀಯ ಶಾಂತಿಯನ್ನು ಕಾಯ್ದುಕೊಂಡು ಹೋಗಬೇಕೆಂದು ಮುಖ್ಯ ಮಂತ್ರಿ ನೆಹರೂರವರಿಗೆ ತಾವಿನ ಮೂಲಕ ತಿಳಿಸಿದ್ದೇನೆ. "ಯುದ್ಧವಿಲ್ಲ" ಘೋಷಣೆಯನ್ನು ಕಾರ್ಯಗತಮಾಡಬೇಕೆಂದು ಭಾರತ ಮುಖ್ಯ ಮಂತ್ರಿಗಳಿಗೆ ಮನವೊಲಿಸಲು ನಾನು ಸಾಧ್ಯವಿದ್ದ ಪ್ರಯತ್ನವನ್ನೆಲ್ಲ ನೂಡಿದೆ. ಆದರೆ ಈ ನನ್ನ ಸೂಚನೆಗೆ ಭಾರತದ ಮುಖ್ಯ ಮಂತ್ರಿಗಳು ಒಪ್ಪಲಿಲ್ಲ. ಭಾರತ ಪಾಕಿಸ್ತಾನಗಳ ನಡುವಿನ ಮುಖ್ಯವಾದ ಹಾಗೂ ಗಂಡಾಂತರ ಪ್ರಾಯವಾದ ಸಮಸ್ಯೆಯು ಜಮ್ಮು-ಕಾಶ್ಮೀರಗಳಿಗೆ ಸಂಬಂಧಿಸಿದೆ. ಆದರೆ ನಮ್ಮ ರಾಷ್ಟ್ರದ ಅತ್ಯಂತ ಜನಸಾಂದ್ರತೆಯು ಮತ್ತು ಬೆಲೆಯುಳ್ಳ ಈ ಭಾಗವನ್ನು ಭಾರತದ ಸೈನ್ಯಗಳು ಒತ್ತಾಯದಿಂದ ಆಕ್ರಮಣ ಮಾಡಿಕೊಂಡಿವೆ. ಕಾಶ್ಮೀರದಿಂದ ಸೈನ್ಯಗಳನ್ನು ಹಿಂತೆಗೆದುಕೊಳ್ಳಲು ಭಾರತವು ಯಾವಾಗಲೂ ನಿರಾಕರಿಸುತ್ತಾ ಬಂದಿದ್ದು, ಅದನ್ನು ಇನ್ನೂ ಮುಂದುವರಿಸಲು ಪ್ರಯತ್ನಿಸುತ್ತಿದೆ. ಪಾಕಿಸ್ತಾನವು ಭದ್ರತಾ ಮಂಡಲದೊಡನೆ ಸಂಪೂರ್ಣ ಸಹಕರಿಸುತ್ತಾ ಬಂದಿದೆ. ಈ ಧೋರಣೆಯಿಂದ ಪಾಕಿಸ್ತಾನವು ಭದ್ರತಾ ಮಂಡಲದ ಗೊತ್ತುವಳಿಯನ್ನು ಮನ್ನಿಸಿಯುಕ್ತರಾಷ್ಟ್ರದ ಪ್ರತಿನಿಧಿಗಳೆಂದು ನೇಮಿಸಲ್ಪಟ್ಟ ಡಾ. ಗ್ರಾಹಮ್‌ರಿಗೆ ಪಾಕಿಸ್ತಾನವು ಸ್ವಾಗತವಿತ್ತಿದೆ ಈ ಗೊತ್ತುವಳಿಯು ರಾಷ್ಟ್ರದ್ವಯಗಳಿಗೂ ಮಾತುಕತೆಗಳ ಅನುಕೂಲ ವಾತಾವರಣವನ್ನು ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತದೆ.

ಆದರೆ ಭಾರತವು ಈ ಗೊತ್ತುವಳಿಯನ್ನು ನಿರಾಕರಿಸಿ ಭದ್ರತಾ ಮಂಡಲದ ಇಚ್ಛೆಗಳನ್ನು ದುರ್ಲಕ್ಷಿಸಿದೆ. ಇದೂ ಅಲ್ಲದೆ ಪಾಕಿಸ್ತಾನದ ಪತ್ರಿಕೆಗಳು ಭಾರತದ ವಿರುದ್ಧ ಯುದ್ಧ ಘೋಷಣೆ ಮಾಡಲು ಜನರನ್ನು ಪ್ರಚೋದಿಸುತ್ತವೆ ಎಂಬುದಾಗಿ ಪ್ರಚಾರ ನಡೆಸಿದೆ. ಆದರೆ ನಿಜವಾಗಿ ಭಾರತದ ಪತ್ರಿಕೆಗಳೂ ಮತ್ತು ಮಂಡಿತರೂ ಈ ಬಗೆಯ ಪ್ರಚಾರದಲ್ಲಿ ತೊಡಗಿರುತ್ತಾರೆ. ಜಮ್ಮು ಕಾಶ್ಮೀರದಲ್ಲಿಯೇ ಯುದ್ಧ ವಿರತಿಭಾಗದಲ್ಲಿಯೂ ಹಿಂದೀ ಸೈನ್ಯವು ಕಳೆದ ಎರಡೂವರೆ ವರುಷಗಳಲ್ಲಿ ನಡೆದ ನೂರಾರು ಘಟನೆಗಳಿಗೆ ಕಾರಣವಾಯಿತಾದುದು. ಪಾಕಿಸ್ತಾನ ಗಡಿಗಳಲ್ಲಿ ನಡೆದಈ ಸೈನಿಕ ಕೇಂದ್ರೀಕರಣವು ಈ ಮುಂಚೆಯೇ ಯೋಜಿತವಾಗಿದೆ. ಮತ್ತು ಈ ಪ್ರಚಾರವು ಭಾರತ ಸೈನ್ಯ ಮುನ್ನಡೆಯುವದನ್ನು ಮುಚ್ಚಲು ಎಂಬಿದ ಕ್ರಮವೆಂದೀಗ ತಿಳಿಯುತ್ತದೆ. ಭಾರತದ ಆಕ್ರಮಣ ಧೋರಣೆಯನ್ನು ನ್ಯಾಯನ್ಯಾಯವನ್ನು ಜಗತ್ತು ವಿಚಾರಿಸಬೇಕು. ಪಾಕವು ಭಾರತದೊಂದಿಗಿನ ತನ್ನ ಸಮಸ್ಯೆಗಳನ್ನು ಶಾಂತಯುತವಾಗಿ ಬಿಡಿಸಿಕೊಳ್ಳಬಯಸುತ್ತದೆಂದು ತನ್ನ ಕಾರ್ಯಗಳ ಮೂಲಕ ಜಗತ್ತಿಗೆ ತೋರಿಸಿಕೊಟ್ಟಿವೆ. ಪಾಕಿಸ್ತಾನವನ್ನು ಸೈನಿಕ ಬೆದರಿಕೆಯಿಂದ ಹೆದರಿಸುವುದು ಸಾಧ್ಯವಿಲ್ಲ. ಅನ್ಯಾಯವಾದುದನ್ನು ಪಾಕಿಸ್ತಾನವು ಧೈರ್ಯದಿಂದ ಎದುರಿಸೀತು.

—oooOoo—

# "ಕಣ್ಣು ಕಾಣದ ಗಾವಿಲರು"

ಲೇ:—"ಕುಲವಧೂ"

ಸ್ತ್ರೀಯರ ಸ್ವಾತಂತ್ರ್ಯವೊತ್ತಗೆಗಳನ್ನು ಪರಿಶೀಲಿಸಿ ಪುರುಷರು ಹೃದಯದಲ್ಲಿ ಸ್ವಾತಂತ್ರ್ಯದ ಹೆಜ್ಜೆ ಹೇಗಾದರೆ ಸ್ತ್ರೀಯರು ಅಡಿಗೆ ಮನೆಯಿಂಬ ಆಫೀಸಿನಿಂದ ಬೆಳಿಗ್ಗೆ ೫ ಸ್ವಾ ಸ್ವೋಟ್ಟಾ ತೆಗೆದುಕೊಂಡು ಹೊ ಪ್ರೀ ಪುಟೆಯ ಒಡಗಾದಲ್ಲಿ ತಡೆದು ಅವನ ಪೃ ದಯ ಕಮಲದಲ್ಲಿ ಸ್ವಾತಂತ್ರ್ಯ ಪತ್ರೆಯುಬೇಕೆಂ ದು ಶ್ರೀಮಂತರೊಬ್ಬರು ಕಾಂಗ್ರೆಸ್–ಪುರ ಕೆ ಕೊಡಗೈ ಪತ್ರಿಕೆಯಲ್ಲಿ ಬರೆದಿದ್ದರು. ಸ್ತ್ರೀಗೆ ಸ್ವರ್ಗದಲ್ಲೂ ಸಾಹಿತ್ಯರಂಗದಲ್ಲಾಗಲಿ ಎಲ್ಲೂ ಸ್ಥಾನವಿಲ್ಲ; ಬದಲು ಅಡಿಗೆ ಮನೆಯಲ್ಲೇ ಸ್ಥಾನವೆಂದು ಅವರ ವಾದವಾಗಿತ್ತು. ಸ್ತ್ರೀಯರು ಯಾರೂ ಸಾಹಿತಿಗಳಾಗಿಲ್ಲ; ವಾಲ್ಮೀಕಿ, ಕಾಳಿದಾಸ ಮೊದಲಾದವರ ಹೆಸರು ವಿನಾ ಬೇರಿಲ್ಲ ಪೆಂದು ಬರೆದು ಆ ಲೇಖನವನ್ನು ಬಹಿ ಶ್ವ ಪ್ರ ಶ್ನ ಅವರ ಪಟ್ಟಕೊಂಡಿದ್ದಾಕೆ. ಅವರೇ ನಿಜವಾದ ಸಾಹಿತ್ಯವೇದರೇನೆಂಬುದನ್ನು ಇವರು ಅರಿಯಬೇಕು. 'ವಿಕ್ರೋಧಿಯು ಶರದಿನ ವಿಪಾಪ, ಇತರರ ಮಹತ್ತೋಯ್ಸಿಸವದು, ಪುನುಗಬೇಧಕ ತಳೆಯೀಕ' ಇವು ಸಾಹಿತ್ಯವಲ್ಲವೆಂದೂ, ಇವು ವಾಡೆಯ ಪೋಷಕೆಂದೂ ಜ್ಞಾನಿಗಳು ಹೇಳಿದ್ದಾರೆ. ಇವು ಸಾಹಿತ್ಯಗಳಿಗೆ ಇದೇ ಸಾಹಿತ್ಯವೇನಿಯಮವನ್ನು ಅಲಂಕರಿಸುವ ಸಾಧುಗಳು ಹೀಗಿರುವಾಗ ವಿನೋದನಿಗೆ ವಿನೋದ ಹೆಚ್ಚು ಪ್ರಿಯವು' ವೆಂದು ರಾವುದಾಸರು ಹೇಳಿದ್ದಾಗ ಸಾಹಿತಿಗಳು ಸಿಟ್ಟುಗೊಂಡರಂತೆ. ಸಾಹಿತ್ಯದಲ್ಲಿ ವಿನೋದಕ್ಕೆ ಸ್ಥಾನವಿದೆಯೆಂಬುದು ನಿಜ. ಆದರೆ ವಿನೋದವು ಶಿಷ್ಟೋಚಿತವಾಗಿರಬೇಕು. ಪುಂಖ್ಯೊಬ್ಬರನ್ನು ಕೆಳಗೆ ತಳ್ಳಿ ತಮ್ಮ ಹೆಗ್ಗಳಿಕೆಯನ್ನು ಹೇಳಿಕೊಳ್ಳುವುದು ಹರಟೆಯಲ್ಲ.

ಪತ್ರಿಕೆಯಲ್ಲಿ ನಾಲ್ಕಕ್ಷರ ಬರೆದಿಟ್ಟ ಅದು ಸಾಹಿತ್ಯವಾಗದು. ಸಾಹಿತ್ಯವು ಬಾಳಿನಲ್ಲಿ ಅವಿರ್ಭವಿಸಿ ಸಂಸ್ಕೃತಿಯೊಂದಿಗೆ ಮೂರ್ತಗೊಳ್ಳಬೇಕಾದರೆ ಜೀವನದ ಜೀವಾಳವಾಗಬೇಕು. ಈ ದೃಷ್ಟಿಯಿಂದ ಹೇಳುವುದಾದರೆ ಸ್ತ್ರೀಯರು ಜೀವನವೇ ಸುಂದರ ಸಾಹಿತ್ಯ, ಅನುಪಮ ಸಂಸ್ಕೃತಿ. ಏಕೆಂದರೆ ಮಹಾತ್ಮ ಗಾಂಧಿಯವರಂತೆ ಹೆಂಗಸರೇ ಜೀವನದಲ್ಲಿ ಪವಿತ್ರ ಹಾಗೂ ಧರ್ಮಯೋಧವಾದವುಗಳ ರಕ್ಷಕರು. ಆದ್ದರಿಂದ ಒಂದು ಜನಾಂಗದ ವೈಶಿಷ್ಟ್ಯ, ನಾಗರಿಕತೆ, ಸಂಸ್ಕೃತಿಗಳು ಉಳಿದಿದ್ದರೆ ಅದು ಹೆಂಗಸರಲ್ಲಿ. ಇವರ ಶತ್ಯಕೆಯನ್ನು ನೋಡುವ ಕಣ್ಣಿದ್ದರೆ ಎಲ್ಲೆಡೆಯಲ್ಲೂ ನೋಡಬಹುದಾಗಿದೆ.

ಇಂದಿನ ಸ್ತ್ರೀ ಸಮೂಹವು ತಪ್ಪು ಮಾಡುತ್ತಿಲ್ಲವೆಂದು ನಾನು ಹೇಳುವಾಗಿ. ಹಾಗೆ ಅವರು ದಾರಿ ತಪ್ಪಿದ್ದರೆ, ಅವರು ಸ್ವಾತಂತ್ರ್ಯ ಚ್ಯುತರಾಗಿದ್ದರೆ ಅದಕ್ಕೆ ಪುರುಷರೇ ಕಾರಣ. ಹಿಂದಿನ ಭಾರತದಲ್ಲಿ ಸ್ತ್ರೀಗೆ ಪೂರ್ಣ ಸ್ವಾತಂತ್ರ್ಯವಿತ್ತು. ಪುರುಷರು ವಿಚಾರದಲ್ಲೂ ಆಕೆ ಸ್ವತಂತ್ರಳಾಗಿದ್ದಳು. ಸ್ವಯಂವರ ಪದ್ಧತಿ ಇದ್ದು ತನಗೆ ಬೇಕಾದವರನ್ನು ಆಕೆ ಆರಿಸುತ್ತಿದ್ದಳು. ಆಗಿನ ಕಾಲಕ್ಕೆ ಬಾಳಿ ಬೆಳಗಿದ ಪತಿವ್ರತಾ ಮಣಿಗಳು ಸಾವಿರ ಸಂಖ್ಯೆಯಲ್ಲಿ ಇದ್ದಾರೆ. ತಮ್ಮ ಕಾಲದ ಮಹಾಮಹಾ ಪಂಡಿತರ ಸ್ನೇಹವನ್ನು ಪಡೆದು ಶಾಸ್ತ್ರಾಭ್ಯಾಸ ಮಾಡಿ ಪಾಂಡಿತ್ಯ ಗಳಿಸಿದ್ದ ಮೈತ್ರೇಯಿ, ಗಾರ್ಗಿ ಮೊದಲಾದ ಮಹಾ ಜ್ಞಾನಿಯರ ಹೆಸರನ್ನು ಯಾರು ತಾನೆ ಕೇಳಿಲ್ಲ? ಇವರೆಲ್ಲ ಪುರುಷರಿಗಿಂತ ಕಡಿಮೆಯವರಾಗಿದ್ದರೆ? ಅಂದು ಅಂತಹ ಶ್ರೇಯಸ್ಕಾಂಕ್ಷಿ ಗಳಾದ ಪುರುಷರು ಹೆಸರು ಕೇಳದವರಾರು? ಅಂದು ಅಂತಹ ಶ್ರೇಯಸ್ಕಾಂಕ್ಷಿಗಳಾದ ಪುರುಷರಿಗೆ ಇಂದಿನಂತಾಗಲು ಕಾರಣರಾರು? ಇಂದಿನ ಸೆಕ್ಸ್ ಹೆಚ್ಚರುಗಳ ದಾಸ್ಯಯುಗವನ್ನು ಎತ್ತಿ ರೀಹಿಸುತ್ತಿರುವ ಕ್ರಾಲಿಟಿಯುಗವನ್ನು ನಿರ್ಮಿಸಿದವರಾರು?

ಶತಮಾನಗಳಿಂದಲೂ ಗಂಡಸೇ ಜಗತ್ತಿನ ಸ್ವಾಮಿ. ಅತ್ಯಲ್ಪಸಂಖ್ಯೆಯೊಳಗಿನ ಹೆಂಗಸರನ್ನು ಅವನು ಆಟದ ಪಶುವಾಗಿ ಮಾಡಿಕೊಂಡಿದ್ದಾನೆ. ಆ ಆಟದ ವಸ್ತು ತನ್ನ ಕಣ್ಣಿಗೆ ಕೌತುಕಾಯವಾಗಿ ತೋರಬೇಕು. ಆದು ತನ್ನ ಇಚ್ಛೆಯಂತೆ ಕುಣಿಯಬೇಕೆಂದು ಗಂಡಸು ಏನೆಲ್ಲ ಮಾಡಿಲ್ಲ? ಪಶ್ಚ ಶವುಗ್ರಗಳನ್ನು ಹೋಕ್ಕಿ ಅನುಗಳ ತಳದ್ದಿಂದ ಮುತ್ತು ರತ್ನಗಳನ್ನು ತೆಗೆದು ತಂದ್ರು. ಆಕೆಯನ್ನು ಶೃಂಗರಿಸಿದ್ದಾನೆ. ಭೂಗರ್ಭವನ್ನು ಹೊಕ್ಕಿ ಬೆಳ್ಳಿ, ಚಿನ್ನ, ವಜ್ರಗಳನ್ನು ತಂದು ಮುಡಿದಿದ್ದಾನೆ. ಬಾನ ಪಕ್ಷಿಗಳನ್ನು ಸುಟ್ಟು ತಿನ್ನಾ ಹೂ ಪ ವಿಪ್ರಾಣಿಗಳನ್ನು ತಂದು ಮುಡಿದ್ದಾನೆ. ವಿವಿಧ ಬಟ್ಟೆಬರೆಗಳಲ್ಲಿ ನಳಗಿಸಿದ್ದಾನೆ. ಗಂಡಸು ವಿಶೇಷವಾಗಿ ಇಷ್ಟೆಲ್ಲ ಶ್ರಮಿಸಿದ್ದಾನೆಯೆ? ಹೆಂಗಸು ತನ್ನ ಕಣ್ಣಿಗೆ ಸೊಗಸು ತ್ತೋರಬೇಕೆಂದು! ತನ್ನ ಕಾಮವಿಪಾಸೆಯನ್ನು ತೃಪ್ತಿಪಡಿಸುವ ಸಾಧನವಾಗಬೇಕೆಂದು! ಜಗತ್ತಿನ ಇಡೀ ಪುರಾಣ ಸ್ತ್ರೀಹತ್ಯೆಗಳನ್ನು ಅವಲೋಕಿಸಿರಿ. ಕವಿಗಳ ಗಾನವನ್ನು ಸ್ತ್ರೀ ಸಾಹಿತಿಗಳ ವರ್ಣನೆಯನ್ನೂ ಆಲಿಸಿರಿ. ಅದರಲ್ಲಿ ಹೆಂಗಸಿನ ವರ್ಣನೆಯೆಲ್ಲ ಹೇಗೇನಿದೆ? ಆಳೆಯನ್ನು ವಿಧ ವಿಧವಾಗಿ ಶೃಂಗರಿಸಿ, ಮೆರೆಸಿ, ವರ್ಣಿಸಿ ಆಕೆಯ ದಾರಿ ತಪ್ಪಿಸಿದ ಗಂಡಸು ಇಂದಿನ ಆಕೆಯ ಸ್ವಾತಂತ್ರ್ಯವಾವುದೆಂದು ಪ್ರಶ್ನಿಸುವುದೇ?

ಪಶುವಿಗಿಂತಲೂ ಮನುಷ್ಯ ಫೀಜ ನಾಗಬಲ್ಲ; ಸರಿ. ಕ್ರಮದಿಂದ ಪರಮೋತ್ಕೃಷ್ಟ ಸಾಧಿಸಿಯೂ ಬಲ್ಲ. ಸ್ವಯಂ ಶ ಪೆಟ್ಟಿಯನ್ನು ಸಾರಿ ತಿಂದು ಇತರ ಜೀವ ಜಂತುಗಳನ್ನು ಹುಟ್ಟಿಸಿ ಸಿಂಹದಂತೆ ಸರ್ವಾಂಗ ಪುಷ್ಟನಾಗಬಲ್ಲ. ಪರರಿಗಾಗಿ ತನ್ನ ದೇಹ ತ್ಯಾಗ ಮಾಡಬಲ್ಲ. ಅನೇಕರನ್ನು ಹಿಂಸಿಸಿ ಘಾತಕನಾಗಬಲ್ಲ. ಪರರಿಗಾಗಿ ಬಲಿದಾನ ಮಾಡಿ ಪವಿತ್ರಾತ್ಮನೆನಿಸಿಕೊಳ್ಳಬಲ್ಲ. ಪಶುವಿನ ಶಕ್ತಿಗೆ ಹೋಲಿಸಿದ್ದರೆ ಅದರ ಗಣ್ಯ ದೌರ್ಬಲ್ಯಗಳೇ ಹೆಚ್ಚು ಹಿದ್ದಿವೆ. ಆದರೆ ಮನುಷ್ಯನಿಗೆ ಇಲ್ಲ. ಅತ್ಯಲ್ಪ ಪಶುವಿಗಿಂತಾ ತೆಳಗೆ ಬೀಳಬಲ್ಲ ದೇವತೆಗಳ ಪಟ್ಟಿಕ್ಕೆ ಏರಬಲ್ಲ. ಬೀಳಬಲ್ಲವನೇ ಏರಬಲ್ಲ" ಎಂದು ಅಜಾರ್ಜಿ ವಿನೋದರು ಹೇಳಿದ್ದಾರೆ. ಆದರಂತೆ ಶತಮಾನಗಳಿಂದ ಜಗತ್ತಿನ ಸರ್ವಸ್ವರ್ಗಗಳ ಮೇಲೆ ತನ್ನ ಸ್ವಾಮಿತ್ವವನ್ನು ಸಡಿಸಿದ ಮನುಷ್ಯನು ಪಶುವಿಗಿಂತಾ ಕೆಳಗಿಳಿದಿದ್ದಾನೆಯೇ? ಯಾ ದೇವತೆಗಳ ವರ್ಗಕ್ಕೇರಿದ್ದಾನೆಯೇ?—ವಾಚಕರೇ ಊಹಿಸಿ ಕೊಳ್ಳಲಿ. ಕೆಲವೆಡೆ ದೇವಪಂತೆ ವರ್ತಿಸಿದ್ದರೆ ಅಪಸು ಹುಲುವೆಡೆ ಪಶುವಿಗಿಂತಲೂ ಕೆಳಕ್ಕೆ ಹೆಜ್ಜೂರಿ ವರ್ತಿಸಿದ್ದಾನೆ. ಪರಿಣಾಮ ವಾಗಿ ಜಗತ್ತು ಅನೇಕಸಲ ಅಣುವಾಗಿದೆ. ತನ್ನ ಹೆಗ್ಗಳಿಕೆಗಾಗಿ ಜಗತ್ತಿನ ಪರ್ವಸ್ವವನ್ನು ಬಲಿಕೊಡಲು ಅವನು ಹಿಂಜರಿಯಲಿಲ್ಲ. ತನ್ನ ಹೆಮ್ಮೆಯನ್ನು ಹೆಗ್ಗಳಿಕೆಯನ್ನು ಧ್ವಂಸಪಡಿಸುವ ಪ್ರಸ್ತಾಪವಹರಣಕ್ಕೂ ಹೇಸಲಿಲ್ಲ. ಸ್ವಾರ್ಥಪರತೆಗಾಗಿ ತನ್ನ ಸ್ವಾರ್ಥಕ್ಕಾಗಿ ಕುಲ ಮೂಲವೇ ಯಾದ ಸ್ತ್ರೀಯನ್ನು ಕೂಡ ದಣ್ಣರಣ್ಯ ಗುಹೆಯಲ್ಲಿ ನಿಲ್ಲಿಸಿದ್ದಾನೆ. ಜಗತ್ತಿನ ಉದ್ಧಾರಕ್ಕೆ ತಾನು ಮುಂಬರದಿದ್ದರೆ ಸರ್ವನಾಶವಾಗುವದೆಂಬುದನ್ನು ಆತ ತಿಳಿದಿದ್ದಾನೆ. ಆದ್ದರಿಂದಲೇ ಆತ ಇಂದು ತನ್ನ ಸ್ವಾತಂತ್ರ್ಯದ ವಿಜಯ ದುಂಧುಬಿಯನ್ನು ಊದುತ್ತಿರುವನು. ಇಲ್ಲದ ಕೋಡಂಗಿ ಮೂಡಿಸಿ ಮುಂದಾಗಿ ವಿವಿಧ ಕ್ಷೇತ್ರಗಳಲ್ಲಿ ಕಾಡೋಡಿಸಿ ಖಳನಾಗುವನು. ದಿಕ್ಕಿಲ್ಲದ ಗಂಡಸಿಗೆ ಯೋಗ್ಯ ವಿದ್ಯೆಯನ್ನು ಕೊಡುವ ಮಹಾ ಜವಾಬ್ದಾರಿಯನ್ನು ಹೊತ್ತ ಶಿಕ್ಷಕಿಯಾಗಿ ನಿಂತಿರುವಳು. ಗಂಡಸಿಗೆ ಹೊಸ ವಿದ್ಯೆ, ಬದ್ಧ ಕಲಿಸಲು ಶಿಶುವಿಹಾರಗಳನ್ನಿ ಹೊಸ ವಿದ್ಯಾಪದ್ಧತಿಯನ್ನು ಕೈಕೊಂಡಿರುವಳು. ಬಾಗಿಲಿನ ಮರೆಯನ್ನು ಬಟ್ಟು ರಾಜನಗರ, ಸಭಾಮಂಟಪ, ಶಾಸನಸಭೆಗಳನ್ನು ಪ್ರವೇಶಿಸುತ್ತಿರುವಳು. ಗಂಡಸು ವರ್ಗವು ಯಾವ ಅಧಃಪತನ ವಿನಾಶಪಥದಲ್ಲಿ ಅಣುಬಾಂಬು ಹೈಡ್ರೋಜನ್ ಬಾಂಬುಗಳನ್ನು ಹಿಡಿದು ಮುಂದರಿಯುತ್ತಿರುವಾಗ ಮನುಜಕುಲವನ್ನು ಉದ್ಧರಿಸುವ ಸ್ತ್ರೀಯು. ಮುಂಬಂದು ಜಗದ್ರಕ್ಷಕಿಯಾಗಬೇಕಲ್ಲದೆ ಜಗತ್ತಿಗೆ ಶಾಂತಿಯು ಬೇರೆ ದಾರಿ ಇಲ್ಲ.

ಈ ತಾರ್ಕಿಕರು ತಿಳಿದಂತೆ ಸ್ವಾತಂತ್ರ್ಯವೇ ಗಮ್ಯೋದ್ದೇಶ್ಯ ಜೀವನವಲ್ಲ—ಜಗತ್ತನ್ನು ತೃಪ್ತಿಪಡಿಸಿ ಕ್ರೀಡೆಗೆ ಹೋಗುವದೇ ಪುರುಷಾರ್ಥವಲ್ಲ. ಈ ಜಗನ್ನು ಜೀವಿಸಲಿಕ್ಕಾಗಿ. ಮುಂಬಾರುವ ಎರಡು ತೊಡೆಯೆಗಳನ್ನು ಎಳ್ಳುರಿಸಿ ಜೀವಿಸುವವನೇ ಪ್ರಜ್ಞಾರ್ಹನು. ಆದ್ದರಿಂದಲೇ ಗೃಹಸ್ವಾತಂತ್ರ್ಯವನ್ನು ಪರಿತ್ಯಜಿಸಿ ಸ್ತ್ರೀಯು ಸಾರ್ವಜನಿಕ ಜೀವನಕ್ಕೆ ಬರಬೇಕೆಂಬ ಕೂಗು ಕೇಳಿಬರುತ್ತಿದೆ. ಆದರೆ

# ಹೆಚ್ಚು ಬೆಳೆ ಬೆಳೆಸುವ ಸ್ಪರ್ಧೆಗಾರರಿಗೆ ಸೂಚನೆಗಳು

ಭತ್ತ—ಕೊಡಗು ವ್ಯವಸಾಯ ಇಲಾಖೆಯ ಅಭಿಪ್ರಾಯ

ಭತ್ತದ ಬೆಳೆಯಲ್ಲಿ ಸರಕಾರದ ಬಹುಮಾನ ಪಡೆಯಲು ಬಯಸುವ ಕೃಷಿಕರು ಹೆಚ್ಚು ಆಹಾರವನ್ನು ಬೆಳೆಸಲು ಸಹಾಯವಾಗುವ ಕೃಷಿಯ ಕೆಲವು ಸಾಮಾನ್ಯ ತತ್ವಗಳನ್ನು ಅನುಸರಿಸಬೇಕು. ಹೆಚ್ಚು ಆಹಾರ ಬೆಳೆಸುವ ಸ್ಪರ್ಧೆಯಲ್ಲಿ ಭಾಗವಹಿಸುವವರು ಕೃಷಿಯ ಸಾಮಾನ್ಯ ತತ್ವಗಳನ್ನು ಅನುಸರಿಸಿ ಹೆಚ್ಚು ಆಹಾರ ಬೆಳೆಸುವ ಪ್ರಯತ್ನ ಮಾಡಬೇಕೆಂದು ಕೋರಲಾಗಿದೆ. ಆದರೆಂದಲೆ ಪ್ರತಿಯೊಬ್ಬ ವ್ಯವಸಾಯಗಾರರೂ ಶ್ರಮವಹಿಸಿ ಹೆಚ್ಚು ಆಹಾರ ಬೆಳೆಸಿ ಜನಸಾಮಾನ್ಯರ ಹಸಿವೆಯನ್ನು ಪರಿಹರಿಸಲು ಪ್ರಯತ್ನ ಪಡುವುದೇ ಅಲ್ಲದೆ ದೇಶದಲ್ಲಿ ಹೆಚ್ಚು ಆಹಾರ ಬೆಳೆಸಲು ಇದೆಷ್ಟು ಪ್ರಯತ್ನ ಪಡುತ್ತಿದೆಯೆಂಬುದನ್ನು ಪರಿಶೀಲಿಸಲು ಸರಕಾರಕ್ಕೆ ಸಹಾಯ ಮಾಡಬೇಕಾಗಿ ಈ ಮೂಲಕ ಕೋರಿಕೊಳ್ಳಲಾಗಿದೆ. ಯಾವ ರೀತಿ ನೀವಿ ನೆಲ, ಗದ್ದೆಗಳಲ್ಲಿ ಹೆಚ್ಚು ಆಹಾರವನ್ನು ಬೆಳೆಸಬಹುದೆಂಬ ಕೆಲವು ವಿಚಾರಗಳನ್ನು ಸೂಕ್ಷ್ಮ ರೀತಿಯಲ್ಲಿ ಈ ಕೆಳಗೆ ವಿವರಿಸಲಾಗಿದೆ.

ಒಂದು ಭೂಮಿಯಲ್ಲಿ ಪರಮೋವಧಿ ಫಸಲನ್ನು ಬೆಳೆಯಬಹುದಾದ ಸಲಹೆಗಳು ಕೃಷಿಕಾರ್ಯ ವ್ಯವಸಾಯವನ್ನು ವಿಸ್ತಾರವಾಗಿಯೂ ಏಕ್ಷ ವಿಧವಿಧವಾಗಿ ಸಂಪೂರ್ಣವಾಗಿ ಯೂ ಇರಬೇಕು.

ಉಳುವುದು:— ಹೆಚ್ಚು ಆಳವಾಗಿ ಉತ್ತಷ್ಟೂ ಫಲವು ಅಷ್ಟೂ ಅಧಿಕವಾಗುವುದು. ಆದಕಾರಣ ಮೊದಲನೆಯ ಎರಡು ಸಾಲು ಉಳುವಾಗ ಕಬ್ಬಿಣದ ನೇಗಿಲನ್ನೇ ಉಪಯೋಗಿಸಬೇಕು. ಭೂಮಿಯಲ್ಲಿ ಉಳದ ಸ್ಥಳವನ್ನು ಬಿಡಲೇ ಬಾರದು. ಹಾಗೆ ಮಾಡುವುದು ಉತ್ತಮ ಉಳುವಿಕೆ ಅಲ್ಲ. ಅಲ್ಲಲ್ಲಿರುವ ಕಚ್ಚಡಗಳು ಸಂಪೂರ್ಣವಾಗಿ ಕೊಳೆಯುವಂತೆ ಆರು ಸಾಲು ಉಳಬೇಕು. ಭೂಮಿಯ ಮೇಲಿನ ಮಣ್ಣು ಮತ್ತು ಬೆಳೆಯ ಅವಶೇಷಗಳ ನಡುವೆ ಬಲಗಳು ಇರಲು ಅವಕಾಶ ಕೊಡಬಾರದು. ಈ ನಡುವೆ ಬಲಗಳು ಗದ್ದೆಗಳಿಗೆ ಸಲೀಸು ನೀರು ಸರಬರಾಯಾಗುವುದಕ್ಕೂ ಕಡೆಗಟ್ಟುವುದಕ್ಕೂ ಭೂಮಿಯು ಅಕ್ಕಪಕ್ಕ ಮಟ್ಟಗೂ ಸಮತಟ್ಟಾಗಿರಬೇಕು. ಸಮತಟ್ಟಾಗದ ಪಕ್ಷದಲ್ಲಿ ಬೆಳೆಯೂ ವ್ಯತ್ಯಾಸವಾಗುವುದು. ಪ್ರತಿ ಸಸ್ಯದಿಂದಲೂ ಅಗುವ ಫಸಲು ಪರಮೋವಧಿ ಬೆಳೆಗೆ ಸಹಾಯಕವೆಂಬುವುದನ್ನು ಜ್ಞಾಪಕದಲ್ಲಿಡಬೇಕಷ್ಟೆ. ಏರು ತಗ್ಗಾದ ಭೂಮಿಯು ದೆಸೆಯಿಂದ ಬೆಳೆಯು ಕಡಿಮೆಯಾಗುವುದು.

**ಬೀಜಗಳು:**— ಉತ್ತಮ ಬೀಜವನ್ನೇ ಯಾವಾಗಲೂ ಉಪಯೋಗಿಸಿರಿ ನಿಮ್ಮ ಭೂಮಿಗೆ ಹೊತ್ತು ನಿಮ್ಮಲ್ಲಿನ ಹವಾಗುಣಕ್ಕೂ ಅನುಕೂಲಿಸುವಂತಹ ಬೀಜವು ವ್ಯವಸಾಯ ಇಲಾಖೆಯಿಂದ ದೊರೆಯುವಂತಿದ್ದರೆ ಆ ಬೀಜವನ್ನೇ ಉಪಯೋಗಿಸಿರಿ. ಇವು ಉತ್ತಮ ಫಲಕಾರಿಯಾದ ಬೀಜಗಳು. ಇವು ಸಿಕ್ಕುವುದಿಲ್ಲವೆಂದರೆ ಉತ್ತಮವೆಂದು ಕಂಡುಬರುವ ನಿಮ್ಮ ಸ್ವಂತ ಕಣಜಗಳ ಬೀಜಗಳನ್ನೇ ಉಪಯೋಗಿಸಿರಿ. ನಿಮ್ಮ ಸ್ವಂತ ಬೀಜವನ್ನು ಆರಿಸುವ ಪದ್ಧತಿಯಲ್ಲಿ ಕೆಳಗೆ ಹೇಳಿರುವ ಸೂಚನೆಗಳನ್ನು ಅನುಸರಿಸಬೇಕು. ವೆಂಡರಿಗೆ ಉತ್ತಮವೆಂದು ಕಂಡುಬರುವ ನಿಮ್ಮ ಸ್ವಂತ ಕಣಜಗಳ ಬೀಜಗಳನ್ನೇ ಉಪಯೋಗಿಸಿ. ನಿಮ್ಮ ಸ್ವಂತ ಬೀಜವನ್ನು ಆರಿಸುವ ಪದ್ಧತಿಯಲ್ಲಿ ಕೆಳಗೆ ಹೇಳಿರುವ ಸೂಚನೆಗಳನ್ನು ಅನುಸರಿಸಬೇಕು. ವೆಂಡರಿಗೆ ನಿಮ್ಮ ಫಸಲನ್ನು ಕೊಡುವಾಗ ಉತ್ತಮ ಬೆಳೆಯ ಬೀಜವನ್ನು ಬೇರೆಯಾಗಿ ಇಡಬೇಕು. ಮುಂದಿನ ಸಂವತ್ಸರದಲ್ಲಿ ಈ ಬೀಜಗಳನ್ನೇ ಬಿತ್ತಬೇಕು. ನಿಮ್ಮ ಎಲ್ಲಾ ಭೂಮಿಯನ್ನೂ ಇಂತಹ ಬೀಜಗಳಿಂದಲೇ ಬಿತ್ತಲು ಅನುಕೂಲಿಸುವಂತೆ ಈ ಬಗೆಯ ಬೀಜ ತಯಾರಿಕೆಯನ್ನು ಪ್ರತಿ ವರ್ಷವೂ ಹೆಚ್ಚಿಸಿಕೊಳ್ಳಬೇಕು. ಈ ಬಗೆಯ ಬೀಜಗಳ ಆರಿಸುವಿಕೆಯನ್ನು ಪ್ರತಿ ವರ್ಷವೂ ಮಾಡಬೇಕು.

**ಗೊಬ್ಬರ ಸರಬರಾಜು.**

ವಿವಿಧ ಗೊಬ್ಬರ ಬೆರೆಸಿ ಮಾಡುವಾಗಲೂ ಒಟ್ಟಾಗಿ ಗೊಬ್ಬರವನ್ನು ಭೂಮಿಗೆ ಹಾಕುವಾಗಲೂ ಒಂದು ಸಮತೂಕದ ಪ್ರಮಾಣವನ್ನು ಅನುಸರಿಸಬೇಕು ಬರೇ ನೈಟ್ರೋಜನ್, ಫಾಸ್ಫರಿಕ್, ದ್ರಾವಕ ಅಥವ ಪೊಟೇಷ್ ಇವುಗಳನ್ನು ಮಾತ್ರವೇ ಹಾಕಿದರೆ ಪರಮೋವಧಿ ಫಸಲು ಸಿಕ್ಕಲಾರದು. ಇವೆಲ್ಲವನ್ನೂ ಸರಿಯಾದ ಪ್ರಮಾಣದಲ್ಲಿ ಬೆರೆಸಿಮಾಡಿ ಉಪಯೋಗಿಸಬೇಕು. ನೈಟ್ರೋಜನ್ನೇ ಅಧಿಕ ಪ್ರಮಾಣದಲ್ಲಿ ಉಪಯೋಗಮಾಡುವುದರಿಂದ ಫಸಲು ಕಡಿಮೆಯಾಗಿ ಹೆಚ್ಚಾದ ಹುಲ್ಲೇ ಬೆಳೆಯುವುದ. ಫಾಸ್ಫರಿಕ್ ದ್ರಾವಕವೇ ಹೆಚ್ಚಾದರೆ ಹುಲ್ಲಿಗಿಂತಲೂ ಫಸಲು ಹೆಚ್ಚಾಗಬಹುದು. ಆದರೆ ಇದರಿಂದ ಬೆಳೆಯು ಬೆಳವಣಿಗೆಯು ಕ್ಷೀಣವಾಗುವ ಕಾರಣ ಒಟ್ಟು ಫಸಲೇ ಕಡಿಮೆಯಾಗುವುದು. ಪೊಟೇಷ್ ಇಲ್ಲದೆ ಹೋಗುವುದರಿಂದ ಬೆಳೆ ಫಸಲು ಹೆಚ್ಚುವುದು. ಭೂಮಿಯಲ್ಲಿನ ಖನಿಜಗಳ ಜೊತೆಗೆ ಮಣ್ಣಿನಲ್ಲಿ ಸ್ವಜೀವಧಾತುಗಳೂ ಉತ್ತಮ ಪ್ರಮಾಣದಲ್ಲಿದ್ದರೆ ಮಿಶ್ರ ಬೆಳೆಯೂ ಉತ್ತಮ ಫಲವನ್ನು ಕೊಡುವುದು. ಆದ ಕಾರಣ ಈ ಎಲ್ಲಾ ಗೊಬ್ಬರಗಳನ್ನು ಸರಿಯಾದ ಪ್ರಮಾಣದಲ್ಲಿ ಹಾಕಬೇಕು. ಸಸ್ಯವೆ ಧಾತುಗಳು ಕ್ಷಣಗಳ ಗೊಬ್ಬರದಿಂದಲೂ, ಹಸುರು ಎಲೆಗಳಿಂದಲೂ ದೊರೆಯುವುವು. ನೈಟ್ರೋಜನ್ ಪದಾರ್ಥವು ಕಡಲೇಕಾಯಿ ಗೊಬ್ಬರದಿಂದಲೂ ಅಮೋನಿಯಮ್ ಸಲ್ಫೇಟ್ ಎಂಬ ಪದಾರ್ಥದಿಂದಲೂ ದೊರೆಯುವುದು. ಫಾಸ್ಫರಿಕ್ ದ್ರಾವಕವು ಮೂಳೆ ಗೊಬ್ಬರದಿಂದಲೂ ಸೂಪರ್ ಫಾಸ್ಫೇಟ್ ಎಂಬ ಪದಾರ್ಥದಿಂದ ದೊರೆಯುವುದು. ಪೊಟೇಷ್ ಸಾಧಿಯು ಬೂದಿಯಿಂದಲೂ, ಕಾಫಿ ಹೊಟ್ಟಿನಿಂದಲೂ ದೊರೆಯುವುದು. ಸೈವಸಾಯ ಇಲಾಖೆಯಿಂದ ಕೊಡಲಾಗುವ ಗೊಬ್ಬರದಲ್ಲಿ ನೈಫಾಜನ್ ಮತ್ತು ಫಾಸ್ಫರಿಕ್ ದ್ರಾವಕ ಎರಡೂ ಇವೆ. ಒಂದು ಏಕರಿಗೆ ಸುಮಾರು 60 ಪೌಂಡು ನೈಟ್ರೋಜನ್ ಮತ್ತು ಫಾಸ್ಫರಿಕ್ ದ್ರಾವಕವನ್ನು ಸುಮಾರು 40 ಪೌಂಡು ಪೊಟೇಷ್ ಗೊಬ್ಬರವೂ ಕೊಡಗಿನಲ್ಲಿ ಪರಮೋವಧಿ ಭತ್ತವನ್ನು ಬೆಳೆಯಲು ಬೇಕಾಗುವುದು. ಜೆನ್ನಾಗಿ ತಯಾರಿಸಿದ ಬೆಸು ಗೊಬ್ಬರ ದನದಿನ ಗೊಬ್ಬರ ಅಥವ ಕಂಪೋಷ್ಟ್ ಗೊಬ್ಬರ ಇವುಗಳಲ್ಲಿ ಒಂದು ಪೌಂಡು ಹೆಸರು ಸೊಪ್ಪು, ಒಂದು ಚಿಲ್ಲು ಮೂಳೆ ಗೊಬ್ಬರ ಮತ್ತು ಒಂದು ಅಥವ ಎರಡು ಗಾಡಿ ಕಾಫಿಹೊಟ್ಟು ಅಥವ ಒಂದು ಗಾಡಿ ಬೂದಿ ಇವೆಲ್ಲದರಿಂದ, ಬೇಕಾಗುವ ಎಲ್ಲಾ ಪದಾರ್ಥಗಳೂ ಸಮತೂಕ ಪ್ರಮಾಣದಲ್ಲಿ ದೊರೆಯುವುವು. ಈ ರೀತಿ ಮಿಶ್ರಗೊಬ್ಬರವನ್ನು ಉಪಯೋಗಿಸುವಾಗ ಮೂಳೆಗೊಬ್ಬರ ಬದಲು ಕಡಲೇಕಾಯಿ ಹಿಂಡಿಯನ್ನು ಉಪಯೋಗಿಸುವುದನ್ನು ಮೇಲಿನ ರೀತಿಯಲ್ಲಿ ಮಾಡಬಹುದು. ನಿಮ್ಮ ಭೂಮಿಯ ಮಣ್ಣು ಮತ್ತು ಬೆಳೆಯೂ ಇನ್ನೂ ಗೊಬ್ಬರ ತೆಗೆದುಕೊಳ್ಳುವ ಪಕ್ಷ ಶಕ್ತವಾಗಿದ್ದರೆ 50 ಪೌಂಡು ಅಮೋನಿಯಮ್ ಸಲ್ಫೇಟ್ ನಾಟಿಯಾದ ಒಂದು ತಿಂಗಳ ನಂತರ ಉಪಯೋಗಿಸಬಹುದು.

**ಗೊಬ್ಬರ ಹಾಕುವ ಸಮಯ.**

ಎರಡನೆಯ ಸಾಲು ಉಳುವಾಗಲೇ ಕಣಗಳ (ಹಟ್ಟಿ) ಗೊಬ್ಬರವನ್ನು ಹಾಕಬೇಕು. ಹಸರು ಗೊಬ್ಬರವನ್ನು ಮೂರನೆ ಸಾಲು ಉಳುವಾಗಲು ಮತ್ತು ಇತರ ವಿಶ್ರ ಗೊಬ್ಬರವನ್ನು ಕಡೆಯ ಸಾಲು ಉಳುವಾಗಲೂ ಹಾಕಬೇಕು ಹಸುರು ಗೊಬ್ಬರ ಕೊಳೆಯಲು ಸಮಯ ಬೇಕಾಗುವುದರಿಂದ ಅದನ್ನು ಸ್ವಲ್ಪ ಮುಂಚಿತವಾಗ